ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ

PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

Editor : SHIVAKUMAR. K.
M.: 81475 82389 / 9743641515

ಕನ್ನಡ ದಿನಪತ್ರಿಕೆ

₹2/-

ಸತ್ಯದ ಧ್ವನಿ

SKANDAGIRI VANI Kannada Daily FRIDAY | October 16, 2026 | Volume 01 | Issue 90 | Pages 4 |

# ಮಹಿಳೆಯರ ಸಾಮರ್ಥ್ಯಕ್ಕೆ ತಕ್ಕ ಗೌರವ, ಸ್ಥಾನಮಾನ ಸಿಗಬೇಕು

## ಮಹಿಳೆಗೆ ಬೇಕಿರುವುದು ಕನಿಕರವಲ್ಲ ಅವಕಾಶ:ಸದ್ಗುರು ಶ್ರೀ ಮಧುಸೂದನ ಸಾಯಿ

**ಸ್ಕಂದಗಿರಿ ವಾಣಿ ಸುದ್ದಿಜಾಲ**

ಚಿಕ್ಕಬಳ್ಳಾಪುರ: ಮಹಿಳೆಯರಿಗೆ ಕನಿಕರ ತೋರುವುದಕ್ಕಿಂತ ಅವರ ಸಾಮರ್ಥ್ಯವನ್ನು ಗುರುತಿಸಿ ಸೂಕ್ತ ಅವಕಾಶಗಳನ್ನು ಕಲ್ಪಿಸಬೇಕು. ಮಹಿಳೆ ದೈವದತ್ತವಾದ ಜ್ಞಾನ, ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿದ್ದಾಳೆ. ಆದರೆ ಸಮಾಜದಲ್ಲಿ ಆಕೆಗೆ ಅರ್ಹವಾದ ಸ್ಥಾನಮಾನ ಇನ್ನೂ ದೊರೆಯುತ್ತಿಲ್ಲ ಎಂದು ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ಮುದ್ದೇನಹಳ್ಳಿಯ ಸತ್ಯ ಸಾಯಿ ಗ್ರಾಮದಲ್ಲಿ ಬುಧವಾರ ರಾತ್ರಿ ನವರಾತ್ರಿ ಉತ್ಸವದ ಅಂಗವಾಗಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮಕ್ಕೂ ಮುನ್ನ ಆಶೀರ್ವಚನ ನೀಡಿ ಮಾತನಾಡಿದರು.

ಮಹಿಳೆಯರ ಸಾಮರ್ಥ್ಯವನ್ನು ಗುರುತಿಸಿ, ಅವರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಮಹಿಳೆ ಪುರುಷನಿಗಿಂತ ಹೆಚ್ಚು ಬುದ್ಧಿವಂತಿಕೆ ಮತ್ತು ಶಕ್ತಿಯನ್ನು ಹೊಂದಿದ್ದಾಳೆ. ಆಕೆಯಲ್ಲಿ ಜ್ಞಾನದ ಸಂಕೇತವಾದ ಸರಸ್ವತಿ ಹಾಗೂ ಶಕ್ತಿಯ ಪ್ರತೀಕವಾದ ದುರ್ಗೆಯ ಸ್ವರೂಪಗಳಿವೆ. ಆದರೂ ಪುರುಷ ಪ್ರಧಾನ ಮನಸ್ಥಿತಿಯ ಸಮಾಜ ಮಹಿಳೆಯನ್ನು ಅಧೀನದಲ್ಲಿಡಲು ಬಯಸುತ್ತಿರುವುದು ವಿಪರ್ಯಾಸ.



ಕಾರ್ಪೊರೇಟ್ ಕಂಪನಿಗಳ ಆಡಳಿತ ಮಂಡಳಿಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಪ್ರಾತಿನಿಧ್ಯ ದೊರೆಯಲು ಇನ್ನೂ ನೂರು ವರ್ಷಗಳು ಬೇಕಾಗಬಹುದು ಎಂಬ ವಿಶ್ವಸಂಸ್ಥೆಯ ವರದಿಯನ್ನು ಉಲ್ಲೇಖಿಸಿದ ಅವರು, ಮಹಿಳೆಯರ ಕುರಿತಾದ ಈ ಮನೋಭಾವ ಬದಲಾಗಬೇಕು ಎಂದು ಹೇಳಿದರು.

ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್‌ನ ವಿವಿಧ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಮಿಷನ್‌ನ ಹಲವು ಘಟಕಗಳ ಜವಾಬ್ದಾರಿಯನ್ನು ಮಹಿಳೆಯರೇ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸೇವೆಯ ಮೂಲಕ ಮಾನವೀಯತೆ, ಶಿಕ್ಷಣದ ಮೂಲಕ ಚಾರಿತ್ರ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಪ್ರಭು ಜಿ. ಇಡೀ ಜಗತ್ತನ್ನೇ ಒಂದೇ ಕುಟುಂಬವೆಂದು ಸಾರುವ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್‌ನ ಕೇಂದ್ರ ನಮ್ಮ ಜಿಲ್ಲೆಯಲ್ಲಿರುವುದು ಹೆಮ್ಮೆಯ ಸಂಗತಿ ಎಂದರು. ಭಕ್ತಿಯ ಮೂಲಕ ಮಾನವೀಯ ಸೇವೆ ಸಲ್ಲಿಸುವ ಮತ್ತು ಶಿಕ್ಷಣದ ಮೂಲಕ ಚಾರಿತ್ರ್ಯ ನಿರ್ಮಾಣಕ್ಕೆ ಒತ್ತು ನೀಡುವ ಮುದ್ದೇನಹಳ್ಳಿಯ ಶಿಕ್ಷಣ ಸಂಸ್ಥೆಗಳು ಜಗತ್ತಿಗೆ ಮಾದರಿಯಾಗಿವೆ ಎಂದು ಅವರು ಶ್ಲಾಘಿಸಿದರು.

ಬಳಿಕ ಖ್ಯಾತ ಹಿಂದೂಸ್ತಾನಿ ಗಾಯಕ ಉಸ್ತಾದ್ ಫಯಾಜ್ ಖಾನ್ ಅವರ ಸಂಗೀತ ಕಾರ್ಯಕ್ರಮ ನವರಾತ್ರಿ ಉತ್ಸವಕ್ಕೆ ವಿಶೇಷ ಮೆರುಗು ನೀಡಿತು. ಅವರ ಸುಮಧುರ ಗಾಯನ ಸಂಗೀತಾಸಕ್ತರನ್ನು ಮಂತ್ರಮುಗ್ಧಗೊಳಿಸಿತು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವೈ. ನವೀನ್ ಭಟ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ, ಉಪ ಅರಣ್ಯ ಸಂರಕ್ಷಣಾಧಿಕಾರಿ ಗಿರೀಶ್ ಎಚ್.ಸಿ. ಹಾಗೂ ಪ್ರಶಾಂತಿ ಬಾಲ ಮಂದಿರ ಟ್ರಸ್ಟ್ ಅಧ್ಯಕ್ಷ ಬಿ.ಎನ್. ನರಸಿಂಹಮೂರ್ತಿ ಉಪಸ್ಥಿತರಿದ್ದರು.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕ.ರಾ.ಮು.ವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ, ದೇಶದ ವಿವಿಧ ಬ್ಯಾಂಕಿಂಗ್, ಎಸ್.ಎಸ್.ಸಿ, ಹಾಗೂ ಆರ್.ಆರ್.ಬಿ ಹುದ್ದೆಗಳ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ಕಾಲ ತರಬೇತಿಯನ್ನು ನೀಡಲು ನಿರ್ಧರಿಸಿದೆ. ಆಸಕ್ತರು ಅಕ್ಟೋಬರ್ 17 ರ ಸಂಜೆ 4 ಗಂಟೆ ಒಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ: 0821-2515944 ಅನ್ನು ಸಂಪರ್ಕಿಸಬಹುದೆಂದು ಕುಲಸಚಿವ ಪ್ರೊ. ಎಂ.ಪಿ.ಸದಾಶಿವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಹಕರ ಸಂವಾದ ಸಭೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಬೆ.ವಿ.ಕಂ, ಉಪ ವಿಭಾಗ ಕಚೇರಿಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ವಿ ಹಾಗೂ ಸಹಾಯಕ ಕಾರ್ಯನಿರ್ವಾಹಕ

ಇಂಜಿನಿಯರ್ ವಿ ರವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 17 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದ್ದು, ಆಯಾ ಉಪವಿಭಾಗ ವ್ಯಾಪ್ತಿಗೆ ಒಳಪಡುವ ಗ್ರಾಹಕರು ಸಭೆಗೆ ಹಾಜರಾಗಿ, ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟಂತೆ ಏನಾದರೂ ಕುಂದುಕೊರತೆಗಳು ಇದ್ದಲ್ಲಿ ಕಾನೂನಾತ್ಮಕವಾಗಿ ಪರಿಹರಿಸಿಕೊಳ್ಳಬಹುದೆಂದು ಚಿಕ್ಕಬಳ್ಳಾಪುರ ಬೆವಿಕಂ, ಕಾರ್ಯನಿರ್ವಾಹಕ ಇಂಜಿನಿಯರ್ ಪಿ.ಜಿ.ರಮೇಶ್ ಕುಮಾರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವನಿಧಿ: ಸ್ವಯಂಘೋಷಣೆ ಕಡ್ಡಾಯ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಯಾದ ಯುವನಿಧಿ ಯೋಜನೆಯಲ್ಲಿ ಪದವಿ/ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾಗಳನ್ನು 2022-23 ನೇ ಶೈಕ್ಷಣಿಕ ವರ್ಷದಿಂದ 2025-2026 ರವರೆಗೆ ತೇರ್ಗಡೆಯಾಗಿ ಅರ್ಹತೆ ಹೊಂದಿದ ಅಭ್ಯರ್ಥಿಗಳು ಈಗಾಗಲೇ ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿಯಾಗಿದ್ದು ಹಾಗೂ ಫಲಿತಾಂಶದ ನಂತರ ನಿರುದ್ಯೋಗಿಗಳಾಗಿ 180 ದಿವಸಗಳು ಪೂರೈಸಿದ ಅಭ್ಯರ್ಥಿಗಳಿಗೆ ಜನವರಿ 2024 ರಿಂದ ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ. ಅಭ್ಯರ್ಥಿಗಳು ಈ ಪ್ರಯೋಜನವನ್ನು ಪ್ರತಿ ತಿಂಗಳು ಪಡೆಯಬೇಕಾದರೆ, ಪ್ರತಿ ಮಾಹೆಯಲ್ಲಿ ತಾನು ನಿರುದ್ಯೋಗಿಯೆಂದು, ವ್ಯಾಸಂಗ ಮುಂದುವರೆಸುತ್ತಿಲ್ಲವೆಂದು ಹಾಗೂ ಸ್ವಯಂ ಉದ್ಯೋಗಿಯಲ್ಲವೆಂದು ಸ್ವಯಂಘೋಷಣೆಯನ್ನು ಸೇವಾ ಸಿಂಧುವಿನ ಅಭ್ಯರ್ಥಿಗಳ ಲಾಗಿನ್ ಪೇಜ್‌ನಲ್ಲಿ ಮಾಡಬೇಕಾಗಿರುತ್ತದೆ. ಪ್ರಸ್ತಕ ಮಾಹೆಯಲ್ಲಿ ಅಕ್ಟೋಬರ್ 25 ರ ಒಳಗೆ ಸೇವಾ ಸಿಂಧು ಪೋರ್ಟಲ್‌ನ ವೆಬ್‌ಸೈಟ್ ನಲ್ಲಿ ಸ್ವಯಂ ಘೋಷಣೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಸ್ವಯಂ ಘೋಷಣೆ ಮಾಡದಿದ್ದಲ್ಲಿ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆಯನ್ನು ಮಾಡಲಾಗುವುದಿಲ್ಲ. ಆದುದರಿಂದ ಅಭ್ಯರ್ಥಿಗಳು ಕಡ್ಡಾಯವಾಗಿ ಪತ್ರಿ ತಿಂಗಳು ಸ್ವಯಂ ಘೋಷಣೆ ಮಾಡಿಕೊಳ್ಳತಕ್ಕದ್ದು ಎಂದು ಉದ್ಯೋಗಾಧಿಕಾರಿ ಎಂ.ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಚಾರ ಸಂಕಿರಣ ಸಮ್ಮೇಳನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ವಿಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಸುಸ್ಥಿರ ಅಭಿವೃದ್ಧಿಗಾಗಿ ವಿರಳ ಖನಿಜ ಮೌಲ್ಯ ಸರಪಳಿಯ ಭದ್ರತೆ ವಿಷಯದ ಮೇಲೆ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಸಮ್ಮೇಳನ ನ.4 ಮತ್ತು 5 ರಂದು ಅಕಾಡೆಮಿ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ. ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸ ನೀಡಲಿದ್ದಾರೆ. ವಿಜ್ಞಾನಿಗಳು, ಖನಿಜಾನ್ವೇಷಣೆ, ಗಣಿಗಾರಿಕೆ ಮತ್ತು ಲೋಹಶಾಸ್ತ್ರ ಸಂಸ್ಥೆಗಳು, ಸಂಶೋಧನಾ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು, ಕೈಗಾರಿಕೋದ್ಯಮ, ಇಲಾಖೆ ಸಂಸ್ಥೆಗಳ ಅಧಿಕಾರಿಗಳು, ಉದ್ಯಮಿಗಳು ಮತ್ತು ನವೋದ್ಯಮಗಳ ಪ್ರತಿನಿಧಿಗಳು, ಖರೀದಿದಾರರು ಹಾಗೂ ರಫ್ತುದಾರರು ಭಾಗವಹಿಸಬಹುದು. ಆಸಕ್ತರು ತಮ್ಮ ಸಂಶೋಧನಾ ಪ್ರಬಂಧವನ್ನು ಸಹ ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ ಸಂಶೋಧನಾ ಪ್ರಬಂಧಕ್ಕೆ ನಗದು ಬಹುಮಾನವನ್ನು ನೀಡಲಾಗುವುದು. ಆಸಕ್ತರು ಅಕ್ಟೋಬರ್ 30 ರೊಳಗಾಗಿ ಮೂಲಕ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಿಗಳ ಮೊ:9320767819, 9743084194ಗೆ ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಆರ್.ಆನಂದ್ ತಿಳಿಸಿದ್ದಾರೆ.

# 958 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಯೋಜನೆ

## ಜಿಲ್ಲಾಧಿಕಾರಿಯಿಂದ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ತಾಲೂಕಿನಲ್ಲಿ ಔದ್ಯೋಗಿಕ ಪ್ರಗತಿಗೆ ಬೃಹತ್ ಹೆಜ್ಜೆ ಇಡಲಾಗುತ್ತಿದ್ದು, ಕರ್ನಾಟಕ ಕೈಗಾರಿಕಾ ಪ್ರದೇಶಾ ಅಭಿವೃದ್ಧಿ ಮಂಡಳಿವತಿಯಿಂದ ಸುಮಾರು 958.25 ಎಕರೆ ಪ್ರದೇಶದಲ್ಲಿ ನೂತನ ಚಿಂತಾಮಣಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ಈ ಬೃಹತ್ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿ ವತಿಯಿಂದ ಇಂದು ಬೆಳಿಗ್ಗೆ ತಾಲ್ಲೂಕಿನ ಕನಿಶೆಟ್ಟಿಹಳ್ಳಿ ಸಮೀದಪ ದರ್ಗಾ ಸಮೀಪದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಪ್ರಭುರವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಚಿಂತಾಮಣಿ ತಾಲೂಕಿನ ಒಟ್ಟು 5 ಪ್ರಮುಖ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ 387.79 ಹೆಕ್ಟೇರ್ 958.25 ಎಕರೆ ಪ್ರದೇಶದಲ್ಲಿ ಈ ಕೈಗಾರಿಕಾ ವಲಯ ತಲೆಎತ್ತಲಿದೆ, ಕನಿಶೆಟ್ಟಿಹಳ್ಳಿ, ಬಡಗವಾರಹಳ್ಳಿ, ಮ್ಯಾಕಲಸೋಣ್ಣೇನಹಳ್ಳಿ ಕೂಂಗ ತಿಮ್ಮನಹಳ್ಳಿ ಮತ್ತು ಕಾಗತಿ ಗ್ರಾಮಗಳು ಸೇರ್ಪಡೆಯಾಗಲಿದ್ದು ಇಂದು ತಾಲೂಕಿನ




ಕನಿಶೆಟ್ಟಿಹಳ್ಳಿ ಗ್ರಾಮದ ಮಸೀದಿಯ ಪಕ್ಕದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳು ಹಾಗೂ ಪರಿಸರ ಸಾರ್ವಜನಿಕ ಸಮಿತಿ ಅಧ್ಯಕ್ಷರು ಅಭಿಪ್ರಾಯ ಮತ್ತು ಸಲಹೆ ಸಲ್ಲಿಸಲು ಸಭೆ ಕರೆದು ಎಲ್ಲರೂ ಮಾತನಾಡಲು ಅವಕಾಶವನ್ನು ಕಲ್ಪಿಸಿದ್ದರು. ಈ ಯೋಜನೆಯಿಂದ ಬಾಧಿತರಾಗಬಹುದಾದ ಸ್ಥಳೀಯ ನಿವಾಸಿಗಳು, ಸಾರ್ವಜನಿಕರು ಹಾಗೂ ಪರಿಸರಾಸಕ್ತ ಗುಂಪುಗಳು ಸಭೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳು, ಅಭಿಪ್ರಾಯಗಳು, ಟೀಕೆ-ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಸಲ್ಲಿಸಿದರು.

ಗ್ರಾಮಸ್ಥರು ಅಹವಾಲು ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಪ್ರಭುರವರು ಈಗ ಭೂ ಸ್ವಾಧೀನ ಪ್ರಕ್ರಿಯೆಗಳು ಈಗ ಮುಗಿಯುತ್ತಾ ಬಂದಿದೆ, ಇಲ್ಲಿ ಅಭಿವೃದ್ಧಿ ಕೆಲಸಗಳು ಆಗಬೇಕು, ಇಲ್ಲಿಗೆ ಬರುವ ಕೈಗಾರಿಕಾ ಪ್ರದೇಶಗಳ ಬಗ್ಗೆ ಮೊದಲು ದೇಶ ಮತ್ತು ರಾಜ್ಯದ ಕೈಗಾರಿಕೆಗಳ ಬಳಿ ವಿಷಯ ಮಂಡಿಸಬೇಕು ಆಸಕ್ತ ಕೈಗಾರಿಕೆಗಳು ಬಂದ ಮೇಲೆ ಉದ್ಯೋಗದಲ್ಲಿ ಮೊದಲು ಇಲ್ಲಿನ ಜಮೀನು ಕಳೆದುಕೊಂಡವರಿಗೆ ಆದ್ಯತೆ ನೀಡುವುದಾಗಿ ಹೇಳಿದರು. ಎರಡು ಪಂಚಾಯಿತಿಗಳಿಂದ 15ಸಾವಿರ ಜನಸಂಖ್ಯೆ ಇದೆ ಇಲ್ಲಿ ಕೈಗಾರಿಕಾ ಪ್ರದೇಶವಾದರೆ 15 ಸಾವಿರ ಮಂದಿಗೆ ಉದ್ಯೋಗ ಸಿಗುತ್ತೆ ಎಂದ ಜಿಲ್ಲಾಧಿಕಾರಿಗಳು ಕೆಐಡಿಬಿ ರವರು ಎಲ್ಲಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಶಕ್ತಿ ಮತ್ತು ಧೈರ್ಯ ತುಂಬುವ ಕೆಲಸವನ್ನು ಮಾಡಲು ಕಡ್ಡಾಯವಾಗಿ ಸೂಚಿಸುತ್ತೇನೆ ಎಂದರು. ಜಾಬ್ ಮೇಳ ಮಾಡುವ ಮೂಲಕ ಉದ್ಯೋಗ ಕಲ್ಪಿಸಲಾಗುವುದು ಎಂದರು. ಸಭೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಅಧಿಕಾರ ಮೀನಾಕ್ಷಿ, ಕಾರ್ಯಪಾಲಕ ಅಭಿಯಂತರ ಆದರ್ಶ್ ಕೆ, ಸಹಾಯಕ ಕಾರ್ಯಾಪಾಲಕ ಅಭಿಯಂತರು ಅಖಿಲೇಶ್, ಎಇ. ಚೆಲುರಾಜ್, ಉಮೇಶ್, ತಹಸೀಲ್ದಾರ್ ಸುದರ್ಶನ್ ಯಾದವ್ ಸೇರಿದಂತೆ ಹಲವಾರು ಗ್ರಾಮಸ್ಥರು ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವ ಜಿಲ್ಲಾ ಗೌರವ ಸನ್ಮಾನಕ್ಕೆ ಸಾಧಕರಿಂದ ಅರ್ಜಿ ಆಹ್ವಾನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಬರುವ ನ.1ರಂದು ನಡೆಯಲಿರುವ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿರುವ ಜಿಲ್ಲೆಯ ಸಾಧಕರನ್ನು ಗುರುತಿಸಿ ಗೌರವ ಸನ್ಮಾನ ಮಾಡಲು ನಿರ್ಧರಿಸಲಾಗಿದ್ದು, ಅರ್ಹ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಗಿದೆ.

ಅದರಂತೆ ರಂಗಭೂಮಿ, ಕನ್ನಡಪರ ಹೋರಾಟ, ಜಾನಪದ/ಯಕ್ಷಗಾನ, ಸಾಹಿತ್ಯ, ಸಮಾಜ ಸೇವೆ, ಸಂಗೀತ/ನೃತ್ಯ, ಶಿಕ್ಷಣ ಸೇವೆ, ಚಿತ್ರಕಲೆ.ಶಿಲ್ಪಕಲೆ.ಕರಕುಶಲ, ಪತ್ರಿಕೋದ್ಯಮ.ಪತ್ರಿಕಾ ವಿತರಕರು, ಕ್ರೀಡೆ,

ಗಡಿನಾಡು ಸೇವೆ, ಸಂಕೀರ್ಣ, ವೈದ್ಯಕೀಯ ಮತ್ತು ಪಾರಂಪರಿಕ ವೈದ್ಯಕೀಯ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 26 ಕೊನೆಯ ದಿನವಾಗಿದ್ದು, ಆಸಕ್ತ ಸಾಧಕರು ಚಿಕ್ಕಬಳ್ಳಾಪುರ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು,

ಆಯಾ ಕ್ಷೇತ್ರಗಳಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿರುವವರನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಚಿಕ್ಕಬಳ್ಳಾಪುರ ಜಿಲ್ಲೆಯ ಸಾಧಕರಿಗೆ ಆದ್ಯತೆ ನೀಡಲಾಗುತ್ತದೆ. ಕ್ರೀಡೆ ಹಾಗೂ ಸಂಗೀತ.ನೃತ್ಯ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ 60 ವರ್ಷ ವಯಸ್ಸಿನ ಸಾಧಕರಿಗೆ ಆದ್ಯತೆ ನೀಡಲಾಗುವುದು.

ಎಲ್ಲ ಕ್ಷೇತ್ರಗಳಲ್ಲಿಯೂ ಸಾಮಾಜಿಕ ನ್ಯಾಯ ಹಾಗೂ ಪ್ರಾದೇಶಿಕ ಪ್ರಾತಿನಿಧ್ಯಕ್ಕೆ ಆದ್ಯತೆ ನೀಡಿ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತದೆ.

ಅರ್ಜಿ ಸಲ್ಲಿಸುವ ಸಾಧಕರು ಯಾವುದೇ ಕ್ರಿಮಿನಲ್ ಹಿನ್ನೆಲೆ ಹೊಂದಿರಬಾರದು. ಅವರ ವಿರುದ್ಧ ಪೊಲೀಸ್ ಪ್ರಕರಣಗಳು ಅಥವಾ ದೂರುಗಳು ದಾಖಲಾಗಿರಬಾರದು ಎಂದು ಚಿಕ್ಕಬಳ್ಳಾಪುರ ಉಪವಿಭಾಗಾಧಿಕಾರಿ ಡಿ.ಹೆಚ್. ಅಶ್ವಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚಿನ್ನಸಂದ್ರ ಮಸೀದಿ ಆಸ್ತಿಗೆ ನಕಲಿ ದಾಖಲೆ ಸೃಷ್ಟಿಸಿ

## ದೌರ್ಜನ್ಯ ಪ್ರಾಣ ಬೆದರಿಕೆ ಪೋಲಿಸರಿಗೆ ದೂರು

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ತಾಲೂಕಿನ ಬೆಂಗಳೂರು ರಸ್ತೆಯಲ್ಲಿರುವ ಚಿನ್ನಸಂದ್ರ ಗ್ರಾಮದಲ್ಲಿದ್ದ ನ್ಯೂ ಜಾಮೀಯಾ ಮಸೀದಿ ಟ್ರಸ್ಟ್‌ಗೆ ದಾನವಾಗಿ ನೀಡಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನನ್ನು ಅಕ್ರಮವಾಗಿ ವಶಪಡಿಸಿಕೊಳ್ಳಲು ಯತ್ನಿಸಿ, ಮಸೀದಿ ಕಮಿಟಿ ಸದಸ್ಯರು ಹಾಗೂ ಗ್ರಾಮಸ್ಥರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಪ್ರಾಣ ಬೆದರಿಕೆ ಹಾಕಿರುವ ಘಟನೆ ಬೆಳಕಿಗೆ ಬಂದಿದೆ.

ಘಟನೆಗೆ ಸಂಬಂಧಿಸಿದಂತೆ ಟ್ರಸ್ಟ್‌ನ ಅಧ್ಯಕ್ಷರಾದ ಇಕ್ಬಾಲ್ ಅಹಮದ್ ಖಾನ್ ಕಾರ್ಯದರ್ಶಿ ಮೆಹಬೂಬ್ ಪಾಷಾ ಅವರು ಗ್ರಾಮಸ್ಥರ ಸಮುಖದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರಕರಣದ ಹಿನ್ನೆಲೆ. ದೂರಿನಲ್ಲಿ ತಿಳಿಸಿರುವಂತೆ, 1985ರಲ್ಲಿ ರಂಜಾನ್ ಹಬ್ಬದ ಶುಭ ದಿನದಂದು ಚಿನ್ನಸಂದ್ರ ಗ್ರಾಮದ ಶೇಖ್ ಬುಡನ್ ಸಾಹೇಬ್ ಅವರ ಮಗ ರಫೀಕ್ ಅಹಮದ್ ಅವರು 200/2



ಸರ್ವೆ ನಂಬರ್‌ನ 21 ಗುಂಟೆ ಮತ್ತು 199 ಸರ್ವೆ ನಂಬರ್‌ನ 1 ಎಕರೆ 06 ಗುಂಟೆ ಜಮೀನನ್ನು ಮಸೀದಿಗೆ ದಾನವಾಗಿ ನೀಡಿದ್ದರು.

ಅಂದಿನಿಂದಲೂ ಈ ಜಮೀನು, ಅದರಲ್ಲಿರುವ ಮಸೀದಿ ಹಾಗೂ ಉರ್ದು ಶಾಲೆ ಟ್ರಸ್ಟ್ ಸ್ವಾಧೀನದಲ್ಲಿದ್ದು, ಅಭಿವೃದ್ಧಿ ಪಡಿಸಿಕೊಂಡು ಬರಲಾಗುತ್ತಿತ್ತು. ಈ ನಡುವೆ, ದಾನ ನೀಡಿದ್ದ ರಫೀಕ್ ಅಹಮದ್ ಅವರ ಮಕ್ಕಳು ಹಾಗೂ ಸಂಬಂಧಿಕರು ಮಸೀದಿ ಕಮಿಟಿಗೆ ಕಿರುಕುಳ ನೀಡುವ ಉದ್ದೇಶದಿಂದ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸರ್ವೆ ಮಾಡಿಸಲು ಅರ್ಜಿ ಸಲ್ಲಿಸಿದ್ದರು.

ಆದರೆ, ಕಳೆದ ಹಲವು ದಶಕಗಳಿಂದ ಈ ಜಾಗಕ್ಕೂ ಅವರಿಗೂ ಯಾವುದೇ ಸಂಬಂಧವಿರಲಿಲ್ಲ ಎಂದು ಗ್ರಾಮಸ್ಥರು ಸಾಕ್ಷಿ ನುಡಿದಿದ್ದಾರೆ. ಆದರೆ ಇದೇ ಅಕ್ಟೋಬರ್ 12, ರಂದು ಮಧ್ಯಾಹ್ನ ಸುಮಾರು 12 ಗಂಟೆಗೆ ಮೊಹಮ್ಮದ್ ಆಸೀಂ ರಫೀಕ್ ಹಾಗೂ ಕೈಸರ್ ರಫೀಕ್ ಎಂಬುವವರು ಬೆಂಗಳೂರಿನಿಂದ ಸುಮಾರು 08 ರಿಂದ 10 ಜನ ಅಪರಿಚಿತ ರೌಡಿ ಅಸಾಮಿಗಳನ್ನು ಕರೆತಂದು, ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶಿಸಿ ಸರ್ವೆ ಮಾಡಿಸಲು ಯತ್ನಿಸಿದ್ದಾರೆ.

ಇದನ್ನು ಪ್ರಶ್ನಿಸಲು ಹೋದ ಮಸೀದಿ ಕಮಿಟಿ ಸದಸ್ಯರು ಹಾಗೂ ಗ್ರಾಮಸ್ಥರ ಮೇಲೆ ರೌಡಿಗಳ ತಂಡವು ಕಲ್ಲು, ದೊಣ್ಣೆ ಹಾಗೂ ಮಾರಕಾಸ್ತ್ರಗಳಿಂದ ದಾಳಿ ನಡೆಸಿದೆ. ಹಲ್ಲೆಯಿಂದಾಗಿ ಗ್ರಾಮದ ಅಪ್ಸರ್ ಪಾಷಾ ಅವರ ಕಾಲಿಗೆ ತೀವ್ರ ರಕ್ತಗಾಯಗಳಾಗಿದ್ದು, ಮುಬಾರಕ್ ಪಾಷಾ ಅವರ ಬಲಗೈನ ಕಿರುಬೆರಳು ಮುರಿದು ತೀವ್ರ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಇದರಿಂದ ಗ್ರಾಮದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಶಾಂತಿ ಸಭೆಗೆ ಬರುವುದಾಗಿ ಹೇಳಿ ತಪ್ಪಿಸಿ ಕೊಂಡಿರುವ ಆರೋಪಿಗಳಾದ ಮೊಹಮ್ಮದ್ ಆಸೀಂ ರಫೀಕ್, ಕೈಸರ್ ರಫೀಕ್ ಹಾಗೂ ಅವರ ಜೊತೆಯಲ್ಲಿದ್ದ ರೌಡಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮಸೀದಿ ಕಮಿಟಿ ಹಾಗೂ ಚಿನ್ನಸಂದ್ರ ಗ್ರಾಮಸ್ಥರು ಪೊಲೀಸರನ್ನು ಒತ್ತಾಯಿಸಿ ದೂರು ಸಲ್ಲಿಸಿದ್ದಾರೆ.

# ಖಾದಿ ಮತ್ತು ಗ್ರಾಮೋದ್ಯೋಗ: ಸಮಗ್ರ ಹಾಗೂ ಸುಸ್ಥಿರ ಭಾರತದ ಬುನಾದಿ

ನಾವು ಭಾರತದ ಹೆಮ್ಮೆಯ ನಾಗರಿಕರು – ಇಂದು ಸಹಜ ಜಿ.ಡಿ.ಪಿ. ಯ ವಿಷಯದಲ್ಲಿ ವಿಶ್ವದ 6ನೇ ಅತಿದೊಡ್ಡ ಆರ್ಥಿಕತೆ ನಮ್ಮದು. ದೇಶದ ಒಟ್ಟಾರೆ ಜಿ.ಡಿ.ಪಿ.ಯಲ್ಲಿ ಮೂರನೇ ಒಂದು ಭಾಗದಷ್ಟು ಕೊಡುಗೆ ನೀಡುವ ಎಂ.ಎಸ್.ಎಂ.ಇ. ವಲಯದಿಂದ ಹೆಚ್ಚಿನ ಆರ್ಥಿಕ ಬೆಳವಣಿಗೆ ಸಂಭವಿಸುತ್ತಿದೆ. ಇಲ್ಲಿಯೂ ಸಹ, ಪ್ರಮುಖ ಪಾಲು ಗ್ರಾಮೀಣ ಅತಿ ಸಣ್ಣ ಉದ್ಯಮಗಳಿಂದ ಬರುತ್ತದೆ. ಗ್ರಾಮೀಣ ಆರ್ಥಿಕತೆಯು ಮುಖ್ಯವಾಗಿ ಖಾದಿ ಮತ್ತು ಕೈಮಗ್ಗ ವಲಯದಂತಹ ಗುಡಿ ಕೈಗಾರಿಕೆಗಳ ಮೇಲೆ ಅವಲಂಬಿತವಾಗಿದೆ ಮತ್ತು ಗ್ರಾಮೀಣ ಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟ ಕರಕುಶಲ ಉತ್ಪನ್ನಗಳ ಮೇಲೆ ಅವಲಂಬಿತವಾಗಿದೆ. ಜಗತ್ತು ಇಂದು ಅಸಮಾನತೆ, ವಾತಾವರಣ ಬದಲಾವಣೆ, ಸಂಪನ್ಮೂಲ ಕೊರತೆಯಲ್ಲಿ ಮುಳುಗಿರುವಾಗ, ಐಟಿ ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿ, ಎ.ಐ.ಯಿಂದಾಗಿ ಉದ್ಯೋಗಗಳು ನಿರಂತರವಾಗಿ ನಷ್ಟಗೊಳ್ಳುತ್ತ ಸಾಗುತ್ತಿರುವಾಗ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಬಲಪಡಿಸುವಲ್ಲಿ ಖಾದಿ ಮತ್ತು ಗ್ರಾಮ ಕೈಗಾರಿಕೆಗಳು ಪ್ರಮುಖ ಪಾತ್ರ ವಹಿಸಬಹುದು, ಸ್ಥಳೀಯವಾಗಿ ಕಡಿಮೆ ಸಂಪನ್ಮೂಲ ಬಳಕೆಯೊಂದಿಗೆ ವಲಸೆಯನ್ನು ತಗ್ಗಿಸುವುದಲ್ಲದೆ ಬೇರೆ ಬೇರೆ ಕೌಶಲ್ಯ ಮಟ್ಟದಲ್ಲಿ ಉದ್ಯೋಗಗಳಿಗೆ ಇದು ಅವಕಾಶ ಮಾಡಿಕೊಡುತ್ತದೆ. ಖಾದಿ, ಕೈಯಿಂದ ನೂಲುವ ಕೈಮಗ್ಗ ಮತ್ತು ಕೈಯಿಂದ ಮಾಡುವ ನೇಯ್ಗೆ ಭಾರತದ ಆತ್ಮವಾಗಿದೆ. ಜವಾಬ್ದಾರಿಯುತ ಉತ್ಪಾದನೆಯು ಇಂಧನ, ನೈಸರ್ಗಿಕ ನಾರುಗಳನ್ನು ಬಳಸುವ ಮೂಲಕ ನೀರಿಗೆ ಸಂಬಂಧಿಸಿ ಸಂಪನ್ಮೂಲ ದಕ್ಷತೆಯನ್ನು ಹೊಂದಿದೆ. ಇದು ಬೆಳವಣಿಗೆಯ ಚಾಲಕನಾಗುವ ಸಾಮರ್ಥ್ಯವನ್ನು ನಿಧಾನವಾಗಿಯಾದರೂ ಸ್ಥಿರವಾಗಿ ಗುರುತಿಸಲಾಗುತ್ತಿದೆ.

ನಮ್ಮ ಉದ್ಯಮವು ಪ್ರಾಚೀನ ಕಾಲದಿಂದಲೂ ಬಂದಿರುವ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ; ಇದು ಅತ್ಯುತ್ತಮ ಕೌಶಲ್ಯ ಮತ್ತು ಮಾನವ ಭಾವನೆಗಳ ಸ್ಪರ್ಶದೊಂದಿಗೆ ವೈವಿಧ್ಯಮಯ ಕಲಾತ್ಮಕ ಪ್ರಜ್ಞೆಯನ್ನು ಪ್ರದರ್ಶಿಸುತ್ತದೆ. ಋಗ್ವೇದ, ರಾಮಾಯಣ, ಮಹಾಭಾರತ, ಥಾಲಿಯಾ (ಗ್ರೀಕ್ ಇತಿಹಾಸಕಾರ ಹೆರೋಡೋಟಸ್ ಅವರ ಕೃತಿ) ಮತ್ತು ಕೌಟಿಲ್ಯನ ಬರಹಗಳು ಕೇವಲ ನೂಲು ತೆಗೆಯುವಿಕೆ ಮತ್ತು ನೇಯ್ಗೆಯ ಬಗ್ಗೆ ಮಾತ್ರವಲ್ಲದೆ, ರೇಷ್ಮೆ ಮತ್ತು ಹತ್ತಿಯ ಉತ್ತಮ ಗುಣಮಟ್ಟದ ಬಗ್ಗೆಯೂ ಉಲ್ಲೇಖಿಸಿವೆ. ರಾಮಾಯಣದಲ್ಲಿ ಹತ್ತಿಯನ್ನು ಋಷಿಮುನಿಗಳ ಗುಣಲಕ್ಷಣಗಳೊಂದಿಗೆ ಹೋಲಿಸಿ ಉಲ್ಲೇಖಿಸಲಾಗಿದೆ; ಹಾಗೆಯೇ, ಇಲ್ಲಿನ ವೈವಿಧ್ಯಮಯ ನೇಯ್ಗೆ ಶೈಲಿಗಳು ನಮ್ಮ ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತವೆ. ವಸಾಹತುಶಾಹಿಗಳ ಬೃಹತ್ ಪ್ರಮಾಣದ ಉತ್ಪಾದನಾ ಪದ್ಧತಿಯನ್ನು ಎದುರಿಸಲು, ಮಹಾತ್ಮ ಗಾಂಧೀಜಿಯವರು ಕೈಯಿಂದ ನೂಲು ತೆಗೆಯುವ ಮತ್ತು ನೇಯುವ ಮೂಲಕ 'ಜನಸಾಮಾನ್ಯರಿಂದಲೇ ಉತ್ಪಾದನೆ' ಎಂಬ ಪರಿಕಲ್ಪನೆಯನ್ನು ಬಳಸಿಕೊಂಡರು. ಸ್ವಾತಂತ್ರ್ಯದ ಸಂಕೇತವಾದ ಈ ವಸ್ತ್ರವು ಇಂದು ನೈಸರ್ಗಿಕ, ಆರಾಮದಾಯಕ ಮತ್ತು ಪರಿಸರ ಸ್ನೇಹಿ (ಸುಸ್ಥಿರ) ಗುಣಲಕ್ಷಣಗಳಿಂದಾಗಿ ಜನಪ್ರಿಯ ಫ್ಯಾಷನ್ ಆಯ್ಕೆಯಾಗಿ ಹೊರಹೊಮ್ಮುತ್ತಿದೆ. ಕೈಯಿಂದ ತಯಾರಿಸಲ್ಪಟ್ಟ ಇದರ ಸ್ವರೂಪವು ಇದಕ್ಕೆ ವಿಶಿಷ್ಟತೆಯನ್ನು ನೀಡುತ್ತದೆ, ಆದ್ದರಿಂದ ಇದು ಬೃಹತ್ ಪ್ರಮಾಣದ ಸಾಮಾನ್ಯ ಉತ್ಪಾದನೆಯೊಂದಿಗೆ ಸ್ಪರ್ಧಿಸುವ ಅಗತ್ಯವಿಲ್ಲ. ಸ್ವದೇಶಿ ಮತ್ತು ಸ್ವಾತಂತ್ರ್ಯದ ಸಂಕೇತದಿಂದ ಹಿಡಿದು, ಪರಿಸರ ಪ್ರಜ್ಞೆಯುಳ್ಳ ಹೊಸ ಪೀಳಿಗೆಯ ಸಮಕಾಲೀನ ಫ್ಯಾಷನ್ ಮತ್ತು ಜೀವನಶೈಲಿಯ ಆಯ್ಕೆಯಾಗುವವರೆಗಿನ ಖಾದಿಯ ಪ್ರಯಾಣವು, ಬದಲಾಗುತ್ತಿರುವ ಗ್ರಾಹಕರ ಆದ್ಯತೆಗಳಿಗೆ ಅನುಗುಣವಾಗಿ ಸಂಪ್ರದಾಯವು ಹೇಗೆ ಹೊಂದಿಕೊಳ್ಳಬಲ್ಲದು ಎಂಬುದನ್ನು ತೋರಿಸಿಕೊಡುತ್ತದೆ. ವಾಸ್ತವವಾಗಿ, ಹೆಚ್ಚು ಸುಸ್ಥಿರವಾದ 'ಮೂಲದ ಸಮೀಪವೇ ಉತ್ಪಾದನೆ' ಮಾಡುವ ಸಂಪ್ರದಾಯವು ಖಾದಿ ವ್ಯವಸ್ಥೆಯ ಸಹಜ ಬಲವಾಗಿದೆ. 21ನೇ ಶತಮಾನದಲ್ಲಿ, ಕೃಷಿ, ನೂಲು (ಫೈಬರ್) ಮತ್ತು ಮಾರುಕಟ್ಟೆಯ ನಡುವಿನ ಸಂಪರ್ಕವನ್ನು ಬಲಪಡಿಸುವಲ್ಲಿ ಕೊಡುಗೆ ನೀಡುವಾಗ, (ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ) ಪ್ರಧಾನಮಂತ್ರಿಯವರ "ರಾಷ್ಟ್ರಕ್ಕಾಗಿ ಖಾದಿ, ಫ್ಯಾಷನ್ನಾಗಿ ಖಾದಿ ಮತ್ತು ಪರಿವರ್ತನೆಗಾಗಿ ಖಾದಿ" ಎಂಬ ಕರೆಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ.

ಖಾದಿ ಮತ್ತು ಕೈಮಗ್ಗಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ ನೂಲನ್ನು ಕೈಯಿಂದಲೇ ತಯಾರಿಸುವುದು ಎಂಬುದನ್ನು ಗಮನಿಸಬೇಕು. ನೂಲು ತಯಾರಿಕೆಯು ಕೈಯಿಂದಲೇ ನಡೆಯುವುದರಿಂದ, ಈ ಶ್ರಮ–ಆಧಾರಿತ ಉತ್ಪಾದನಾ ಪ್ರಕ್ರಿಯೆಯು ಹೆಚ್ಚಿನ ಸಂಖ್ಯೆಯ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ತಯಾರಾದ ಕೈ–ನೂಲಿನ ಸುರುಳಿಗಳನ್ನು ಸಂಗ್ರಹಿಸುವ ಖಾದಿ ಸಂಸ್ಥೆಗಳಿಗೆ, ಕಳೆದ ಏಳು ದಶಕಗಳಿಂದ 'ಖಾದಿ ಮತ್ತು ಗ್ರಾಮೋದ್ಯೋಗ' ವಲಯವು ನೆರವು ನೀಡುತ್ತಾ ಬಂದಿದೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಇಲಾಖಾ ಮತ್ತು ಇಲಾಖೇತರ ತರಬೇತಿ ಕೇಂದ್ರಗಳ ಮೂಲಕ ಕೌಶಲ್ಯ ಅಭಿವೃದ್ಧಿ ಮತ್ತು ಉನ್ನತ ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ಸಾಮರ್ಥ್ಯ ವರ್ಧನೆಯನ್ನು ಮಾಡಲಾಗುತ್ತಿದೆ. ದೇಶದ ಗ್ರಾಮೀಣ ಜನಸಂಖ್ಯೆಯು ಒಟು ಪ್ರಮಾಣಕ್ಕೆ ಹೋಲಿಸಿದಾಗ ಮೂರನೇ ಎರಡರಷ್ಟು ಇರುವ ಹಿನ್ನೆಲೆಯಲ್ಲಿ, ಗ್ರಾಮೀಣ ಉದ್ಯಮಿಗಳಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಈ ವಲಯವು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಇಂತಹ ಕ್ರಮಗಳು ತಳಮಟ್ಟದ ಜನರಿಗೆ ಆದಾಯ–ಗಳಿಕೆಯ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಎಸ್ಡಿಜಿ 1 (ಬಡತನ ನಿರ್ಮೂಲನೆ) ಮತ್ತು ಎಸ್ಡಿಜಿ 8 (ಯೋಗ್ಯ ಕೆಲಸ ಮತ್ತು ಆರ್ಥಿಕ ಬೆಳವಣಿಗೆ) ಗುರಿಗಳನ್ನು ನೇರವಾಗಿ ಉತ್ತೇಜಿಸುತ್ತವೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಏಪ್ರಿಲ್ 2025 ರಿಂದ ನೂಲುವಿಕೆ ಮತ್ತು ನೇಯ್ಗೆಯ ಕೂಲಿಯನ್ನು ಹೆಚ್ಚಿಸಿರುವುದು ಹಾಗೂ ಕೆಲಸದ ಉಪಕರಣಗಳು, ಪರಿಸ್ಥಿತಿಗಳು, ಮೂಲಸೌಕರ್ಯ ಮತ್ತು ಮಾರುಕಟ್ಟೆ ಸಂಪರ್ಕಗಳನ್ನು ಸುಧಾರಿಸಲು ನಿರಂತರ ಬೆಂಬಲ ನೀಡುತ್ತಿರುವುದು; ಕುಶಲಕರ್ಮಿಗಳ ಆದಾಯವನ್ನು ಹೆಚ್ಚಿಸುವ ಮತ್ತು ಸಾಂಪ್ರದಾಯಿಕ ಜೀವನೋಪಾಯಗಳನ್ನು ಆಕರ್ಷಕ ಹಾಗೂ ಆರ್ಥಿಕವಾಗಿ ಸುಸ್ಥಿರವಾಗಿಸುವ ನಿಟ್ಟಿನಲ್ಲಿ ನೀಡಲಾಗುತ್ತಿರುವ ಒತ್ತನ್ನು ಬಿಂಬಿಸುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ವ್ಯವಸ್ಥೆಗಳನ್ನು ಕಾಲಕ್ರಮೇಣ, ಅದರಲ್ಲೂ ವಿಶೇಷವಾಗಿ ಕಳೆದ ಒಂದು ದಶಕದಲ್ಲಿ ನಿರಂತರವಾಗಿ ಬಲಪಡಿಸಿರುವುದರಿಂದ, ಉತ್ಪಾದನೆಯು ಸುಮಾರು 4000 ಕೋಟಿ ರೂ.ಗಳನ್ನು ಮತ್ತು ಮಾರಾಟವು ಸುಮಾರು 8000 ಕೋಟಿ ರೂ.ಗಳನ್ನು ತಲುಪಿದೆ.

ಕಾಲ ಮುನ್ನಡೆಯುತ್ತಿರುವಂತೆಯೇ , ಆರಾಮದಾಯಕ ಬಟ್ಟೆಗಳು ಹೊಸ ವರ್ಗಗಳು ಮತ್ತು ಮಹತ್ವಾಕಾಂಕ್ಷೆಯ ಘೋಷ ವಾಕ್ಯಗಳಾಗಿ ವಿಕಸನಗೊಳ್ಳುತ್ತಿವೆ. ಖಾದಿ ಡೆನಿಮ್, ಡಿಸೈನರ್ ಸೀರೆಗಳು ಮತ್ತು ವಧುವಿನ ಉಡುಗೆ, ಸಮಕಾಲೀನ ಶರ್ಟ್‌ಗಳು ಮತ್ತು ಪ್ಯಾಂಟ್‌ಗಳು ಮತ್ತು ರೇಮಂಡ್ ಮತ್ತು ಪೀಟರ್ ಇಂಗ್ಲೆಂಡ್‌ನಂತಹ ಮುಖ್ಯವಾಹಿನಿಯ ಬ್ರ್ಯಾಂಡ್‌ಗಳ ಸಂಗ್ರಹಗಳಲ್ಲಿ ಇದರ ಪರಿವರ್ತನೆಯು ಸ್ಪಷ್ಟವಾಗಿದೆ. ಎಂ.ಎಸ್.ಎಂ.ಇ. ಮತ್ತು ಜವಳಿ ಸಚಿವಾಲಯದ ನಡುವಿನ ಉಪಕ್ರಮವಾದ ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಖಾದಿ (ಎನ್.ಐ.ಎಫ್.ಟಿ, ದಿಲ್ಲಿ, ಉಡುಪುಗಳ ಬಹು ವಿಭಾಗಗಳಲ್ಲಿ, ಮನೆಯಲ್ಲಿ ತಯಾರಿಸಿದ ವಸ್ತುಗಳ ಸಂಗ್ರಹಗಳಲ್ಲಿ, ಮುದ್ರಣಗಳು, ನೇಯ್ಗೆಗಳು, ಕಸೂತಿ ಮತ್ತು ಚಿತ್ರಕಲೆ, ಸೀರೆ ವಿನ್ಯಾಸಗಳನ್ನು ಒಳಗೊಂಡ 2129 ಖಾದಿ ವಿನ್ಯಾಸ ಸಂಗ್ರಹಗಳನ್ನು ಅಭಿವೃದ್ಧಿಪಡಿಸಿದೆ ಮತ್ತು ಸಿ.ಒ.ಇ.ಕೆ. ಜ್ಞಾನ ಪೋರ್ಟಲ್ ಮೂಲಕ ಖಾದಿ ಸಂಸ್ಥೆಗಳು/ಆಕಾಂಕ್ಷಿಗಳಿಗೆ ಅನುವು ಮಾಡಿಕೊಡುವುದನ್ನು ಮುಂದುವರೆಸಿದೆ. ಜಾಗತಿಕ ಶಿಶು ಮತ್ತು ಶಿಶು ಉಡುಪು ವಿಭಾಗವು 2030 ರ ವೇಳೆಗೆ $60 ಶತಕೋಟಿ ಮೀರುವ ನಿರೀಕ್ಷೆಯಿದೆ (ಸಿ.ಎ.ಜಿ.ಆರ್– 5–8.1%) ಮತ್ತು ಸಾವಯವ ಹತ್ತಿ, ಹೈಪೋಲಾರ್ಜನಿಕ್ ಬಟ್ಟೆಗಳು ಮತ್ತು ವಿಷಕಾರಿಯಲ್ಲದ ಉತ್ಪಾದನಾ ಪ್ರಕ್ರಿಯೆಗಳಿಗೆ ಆದ್ಯತೆ ಇರುತ್ತದೆ ಎಂಬ ಅಂಶದಿಂದ ಶಿಶು ಉಡುಪುಗಳ ಕ್ಷೇತ್ರದಲ್ಲಿ ನಮ್ಮ ಪ್ರಯತ್ನವು ಪ್ರೇರಿತವಾಗಿದೆ. 21 ನೇ ಶತಮಾನದ ಭಾರತಕ್ಕಾಗಿ ಬ್ರ್ಯಾಂಡ್ನ ಸ್ಥಾನವನ್ನು ಪ್ರತಿಬಿಂಬಿಸುವ ನವಯುಗ್ ಖಾದಿ ವಿನ್ಯಾಸಗಳನ್ನು ಪ್ರಗತಿ ಮೈದಾನದ ರಾಷ್ಟ್ರೀಯ ಕರಕುಶಲ ವಸ್ತುಸಂಗ್ರಹಾಲಯ ಮತ್ತು ಹಸ್ತಕಲಾ ಅಕಾಡೆಮಿಯಲ್ಲಿ 710 ಹೊಸ ಉತ್ಪನ್ನಗಳೊಂದಿಗೆ "ಹೊಸ ಭಾರತದ ಹೊಸ ಖಾದಿ"ಯನ್ನು ಸಮಕಾಲೀನ ಮತ್ತು ನವೀನ ರೀತಿಯಲ್ಲಿ ಖಾದಿ ಜ್ಞಾನ ಪೋರ್ಟಲ್ ಜೊತೆಗೆ ಪ್ರಸ್ತುತಪಡಿಸಲಾಗಿದೆ. ಝೆನ್ ಝೀ ಯಿಂದ ಹಿಡಿದು ಯುವ ಹೃದಯದ ಜನರವರೆಗೆ ಎಲ್ಲಾ ವಯೋಮಾನದವರನ್ನು ಆಕರ್ಷಿಸಲು ಇತ್ತೀಚೆಗೆ ಅಂತಾರಾಷ್ಟ್ರೀಯ ಯೋಗ ದಿನದಂದು ಯೋಗ ಉಡುಪುಗಳ ಸಂಗ್ರಹ 'ಸ್ವಧಾ'ವನ್ನು ಪ್ರಾರಂಭಿಸಲಾಗಿದೆ.

ಖಾದಿ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಗೆ ಬಹಳ ಕಡಿಮೆ ಹೂಡಿಕೆಯ ಸಾಕಾಗುತ್ತದೆ. ಖಾದಿ ವಿಕಾಸ್ ಯೋಜನೆ, ಗ್ರಾಮೋದ್ಯೋಗ ವಿಕಾಸ್ ಯೋಜನೆ, ಪಿ.ಎಂ.ಇ.ಜಿ.ಪಿ. ಮುಂತಾದ ಯೋಜನೆಗಳ ಮೂಲಕ ಸಹಾಯವನ್ನು ಒದಗಿಸಲಾಗುತ್ತಿದೆ. ಕೆ.ವಿ.ಐ. ಸಂಸ್ಥೆಗಳು/ಘಟಕಗಳು ಉದ್ಯೋಗಾವಕಾಶಗಳನ್ನು ಒದಗಿಸಲು ಅನುವು ಮಾಡಿಕೊಡುತ್ತವೆ. ಆರ್ಥಿಕ ನೆರವು, ಕಾರ್ಯನಿರತ ಬಂಡವಾಳ ಸೌಲಭ್ಯ, ಗುಣಮಟ್ಟದ ಕಚ್ಚಾ ವಸ್ತುಗಳ ಬೆಂಬಲ ತರಬೇತಿ, ಪರಿಕರ ಕಿಟ್‌ಗಳು, ವೇತನ ಪರಿಹಾರ, ಮಾರುಕಟ್ಟೆ ಬೆಂಬಲ, ಡಿಜಿಟಲ್ ಪಾವತಿಗಳ ಪ್ರಚಾರ ಮತ್ತು ಸಾಮಾಜಿಕ ಭದ್ರತಾ ಪ್ರಯೋಜನಗಳು ಸೇರಿದಂತೆ ಎಲ್ಲಾ ಅಗತ್ಯ ಬೆಂಬಲವನ್ನು ಒದಗಿಸುವ ಮೂಲಕ ಸಾಂಪ್ರದಾಯಿಕ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರವು ಪ್ರಮುಖ ಒತ್ತು ನೀಡುತ್ತಿದೆ. ಅಹಮದಾಬಾದ್ನ ಇಡಿಐಐ ನಡೆಸಿದ ಮೌಲ್ಯಮಾಪನ ಅಧ್ಯಯನದ ಪ್ರಕಾರ, ಜನವರಿ 2026 ರಲ್ಲಿ ಸಲ್ಲಿಸಿದ ವರದಿಯಲ್ಲಿ, ಎಲ್ಲಾ ಯೋಜನೆಗಳಲ್ಲಿ 75% ಕ್ಕಿಂತ ಹೆಚ್ಚು ಕುಶಲಕರ್ಮಿಗಳು ಮಧ್ಯಪ್ರದೇಶದ ನಂತರ ಆದಾಯದಲ್ಲಿ ಅಳೆಯಬಹುದಾದ ಹೆಚ್ಚಳವನ್ನು ವರದಿ ಮಾಡಿದ್ದಾರೆ ಮತ್ತು ಈ ಹಿಂದೆ ಕಾಲೋಚಿತ ಅಥವಾ ವಲಸೆ ಕಾರ್ಮಿಕರನ್ನು ಅವಲಂಬಿಸಿದ್ದ ಕುಶಲಕರ್ಮಿಗಳಿಗೆ ವರ್ಷಪೂರ್ತಿ ಸ್ಥಿರ ಉದ್ಯೋಗವನ್ನು ಸೃಷ್ಟಿಸಲಾಗಿದೆ, ಇದು ಕಾರ್ಮಿಕರ ವಲಸೆಯನ್ನು ಕಡಿಮೆ ಮಾಡಿತು. ಆಹಾರ ಸಂಸ್ಕರಣೆ, ಅಗರಬತ್ತಿ ಮತ್ತು ಹನಿ ಮಿಷನ್ ಅಡಿಯಲ್ಲಿ ತರಬೇತಿ ಪಡೆದ ಕುಶಲಕರ್ಮಿಗಳು ಅವಶ್ಯಕ ತೈಲಗಳು, ಪರಿಮಳಯುಕ್ತ ಮೇಣದಬತ್ತಿಗಳು ಅಥವಾ ಮೌಲ್ಯವರ್ಧಿತ ಜೇನುತುಪ್ಪ ಉತ್ಪನ್ನಗಳಂತಹ ಹೊಸ ಉತ್ಪನ್ನ ವರ್ಗಗಳಾಗಿ ವೈವಿಧ್ಯತೆಯನ್ನು ಮೈಗೂಢಿಸಿಕೊಂಡಿದ್ದಾರೆ. ಈ ವೈವಿಧ್ಯೀಕರಣವು ಸ್ಥಳೀಯ ಮಾರುಕಟ್ಟೆ ಏರಿಳಿತಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸಿದೆ. ಖಾದಿಯು ನೇರವಾಗಿ ಮಹಿಳಾ ಸಬಲೀಕರಣವನ್ನು ಉದ್ದೇಶಿಸುವುದರಿಂದ, ಇದು 'ಅಂತರ್ಗತ ಅಭಿವೃದ್ಧಿ'ಯ ಪರಿಕಲ್ಪನೆಗೆ ಪೂರಕವಾಗಿದೆ. ಸುಮಾರು ಐದು ಲಕ್ಷದಷ್ಟು ಖಾದಿ ಕುಶಲಕರ್ಮಿಗಳಲ್ಲಿ ಶೇಕಡಾ 80 ರಷ್ಟು ಮಂದಿ ಮಹಿಳೆಯರೇ ಆಗಿದ್ದಾರೆ. ಅಧ್ಯಯನದ ಪ್ರಕಾರ, ಜಿ.ವಿ.ವೈ. ಯೋಜನೆಗಳಲ್ಲಿ, ವಿಶೇಷವಾಗಿ ಅಗರಬತ್ತಿ, ಕೈಯಿಂದ ತಯಾರಿಸಿದ ಕಾಗದ, 'ಹನಿ ಮಿಷನ್' (ಜೇನು ಕೃಷಿ ಯೋಜನೆ) ಮತ್ತು ಸೇವಾ ವಲಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರಬಲವಾಗಿದೆ. ಹೀಗಾಗಿ, ಈ ವಲಯದಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ವಿವಿಧ ರೀತಿಯಲ್ಲಿ ತೊಡಗಿಸಿಕೊಂಡಿರುವುದು ಅವರಿಗೆ ನೇರ ಆದಾಯವನ್ನು ಖಾತ್ರಿಪಡಿಸಿದೆ; ಇದು ಆರ್ಥಿಕ ಸ್ವಾತಂತ್ರ್ಯ ಹಾಗೂ ಮನೆ ಮತ್ತು ಸಮಾಜದಲ್ಲಿ ಉತ್ತಮ ಆತ್ಮಗೌರವದ ಮೂಲಕ ಅವರನ್ನು ಸಬಲರನ್ನಾಗಿಸಿದೆ. ಮಹಿಳೆಯರು ಉತ್ಪಾದಕ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವ ಮೂಲಕ, ಖಾದಿಯು ಎಸ್.ಡಿ.ಜಿ.




**ಸು.ಶ್ರೀ ರೂಪ್ ರಾಶಿ ಮತ್ತು ಡಾ. ನಿತೇಶ್ ಧವನ್**

(ಸು.ಶ್ರೀ. ರೂಪ್ ರಾಶಿ ಅವರು ಕೆ.ವಿ.ಐ.ಸಿ.ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ ಮತ್ತು ಡಾ. ನಿತೇಶ್ ಧವನ್ ಅವರು , ಕೆ.ವಿ.ಐ.ಸಿ.ಯ ಮುಂಬೈಯ ಉಪ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದಾರೆ)

5 (ಲಿಂಗ ಸಮಾನತೆ) ಕ್ಕೆ ನೇರ ಕೊಡುಗೆ ನೀಡುತ್ತದೆ ಮತ್ತು ಅದೇ ಸಮಯದಲ್ಲಿ ಎಸ್.ಡಿ.ಜಿ. 10 (ಅಸಮಾನತೆಗಳ ಕಡಿತ) ಅಡಿಯಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಕೈಯಿಂದ ತಯಾರಿಸಿದ ಉತ್ಪನ್ನಗಳ ಉದ್ಯಮಕ್ಕೆ ಜಾಗತಿಕ ಬೇಡಿಕೆ ಹೆಚ್ಚುತ್ತಿದೆ ಮತ್ತು ಅದು ಬೃಹತ್ ರಫ್ತು ಸಾಮರ್ಥ್ಯವನ್ನು ಹೊಂದಿದೆ, ಅದನ್ನು ಬಳಸಿಕೊಳ್ಳಬೇಕಾಗಿದೆ. ಅದರ ಪ್ರಮಾಣ ಮತ್ತು ಸಾಂಪ್ರದಾಯಿಕ ಕೈಯಿಂದ ತಯಾರಿಸಿದ ಉತ್ಪನ್ನಗಳ ವೈವಿಧ್ಯತೆಯೊಂದಿಗೆ, ಭಾರತವು ವಿಶ್ವದಲ್ಲಿ ಅನಿವಾರ್ಯ ಸ್ಥಾನವನ್ನು ಪಡೆದುಕೊಂಡಿದೆ. ಜಾಗತಿಕ ಕೈಮಗ್ಗ ಉತ್ಪಾದನೆಯ 85% ಇಲ್ಲಿಯೇ ಸಂಭವಿಸುತ್ತದೆ ಮತ್ತು 'ಆಂತರಿಕ ಮೌಲ್ಯ'ವನ್ನು 'ಹೆಚ್ಚಿನ ಆದಾಯ'ಕ್ಕಾಗಿ ಬಳಸಿಕೊಳ್ಳಬಹುದು. ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶ, ಕಾಂಬೋಡಿಯಾ ಮತ್ತು ಇಂಡೋನೇಷ್ಯಾದಂತಹ ಇತರ ಕೈಮಗ್ಗ ರಾಷ್ಟ್ರಗಳು ಬಹಳ ಸೀಮಿತ ಶ್ರೇಣಿಯ ಉತ್ಪನ್ನಗಳನ್ನು ತಯಾರಿಸುತ್ತವೆ ಆದರೆ ಇವು ಮುಖ್ಯವಾಗಿ ದೇಶೀಯ ವ್ಯಾಪ್ತಿಗೆ. ಭಾರತವು ತನ್ನ ಜನಸಂಖ್ಯಾ ಪ್ರಯೋಜನ ಮತ್ತು ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯ ಆಧಾರದ ಮೇಲೆ ಖಾದಿ ಮತ್ತು ಕೈಮಗ್ಗ ಉತ್ಪನ್ನಗಳ ಜಾಗತಿಕ ಬೇಡಿಕೆಯನ್ನು ಪೂರೈಸುವ ಅಗಾಧ ಸಾಮರ್ಥ್ಯವನ್ನು ಹೊಂದಿದೆ. ಪ್ರಪಂಚದಾದ್ಯಂತದ ಗ್ರಾಹಕರು ಕೈಯಿಂದ ತಯಾರಿಸಿದ, ಗುರುತಿಸಬಹುದಾದ, ನೈಸರ್ಗಿಕ ಮತ್ತು ಪರಿಸರ ಜವಾಬ್ದಾರಿಯುತ ಉತ್ಪನ್ನಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಇದು ಖಾದಿ ಮತ್ತು ಕೈಯಿಂದ ತಯಾರಿಸಿದ ಉತ್ಪನ್ನಗಳನ್ನು ಕೇವಲ ಸಾಂಪ್ರದಾಯಿಕ ಸರಕುಗಳಾಗಿ ಮಾತ್ರವಲ್ಲದೆ, ದೃಢತೆ, ಕರಕುಶಲತೆ ಮತ್ತು ಸುಸ್ಥಿರತೆಯ ಹಿನ್ನೆಲೆಯನ್ನು ಒಳಗೊಂಡಿರುವ ಪ್ರೀಮಿಯಂ ಉತ್ಪನ್ನಗಳಾಗಿ ಮರುಸ್ಥಾಪಿಸಲು ಅವಕಾಶವನ್ನು ಒದಗಿಸುತ್ತದೆ. ವಿದೇಶಾಂಗ ಸಚಿವಾಲಯದ ಅಡಿಯಲ್ಲಿ ನ್ಯೂಯಾರ್ಕ್, ಯುಎಸ್ಎಯಲ್ಲಿರುವ ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾದ ಟ್ರೇಡ್ ಪೋರ್ಟಲ್ನಲ್ಲಿ ಕೆವಿಐಸಿ ಇಪಿಸಿಯಾಗಿ ನೋಂದಾಯಿಸಿಕೊಂಡಿದೆ. ಕೆವಿಐಸಿ ಪ್ರಗತಿಪರ ಕೆಐಗಳನ್ನು ಎಕ್ಸಿಮ್ ಪರವಾನಗಿಗಳೊಂದಿಗೆ ನೋಂದಾಯಿಸಲು ಪ್ರಾರಂಭಿಸಿದೆ ಮತ್ತು ನಮ್ಮ ಸಾಮರ್ಥ್ಯಗಳನ್ನು ಅನಾವರಣ ಮಾಡಲು ಭಾರತದಲ್ಲಿನ ಕಾನ್ಸುಲೇಟ್‌ಗಳೊಂದಿಗೆ ತೊಡಗಿಸಿಕೊಳ್ಳಲು ಪ್ರಾರಂಭಿಸಿದೆ, ಇದು ಅಂತರಗಳನ್ನು ನಿವಾರಿಸಿ ಸೇತುವೆಗಳನ್ನು ನಿರ್ಮಿಸಲು ಅನುವು ಮಾಡಿಕೊಡುತ್ತದೆ.

ಖಾದಿಯು ತನ್ನದೇ ಆದ ಮನ್ನಣೆಯನ್ನು ಹೊಂದಿದ್ದರೂ, ನಮ್ಮ ಉತ್ಪಾದಕರು ಮತ್ತು ಮೌಲ್ಯ ಸರಪಳಿಗಳನ್ನು ರಕ್ಷಿಸುವ ಉದ್ದೇಶದಿಂದ ಇತರ ದೇಶಗಳಲ್ಲಿ ಟ್ರೇಡ್ಮಾರ್ಕ್ ನೋಂದಾಯಿಸುವ ಮೂಲಕ ಈ ಬ್ರ್ಯಾಂಡ್ ಅನ್ನು ಸಂರಕ್ಷಿಸಲಾಗುತ್ತಿದೆ. ಇದಲ್ಲದೆ, ವಿಶಿಷ್ಟವಾದ ಹತ್ತಿ ಹಾಗೂ ವಿಶಿಷ್ಟ ಪ್ರಕ್ರಿಯೆಯ ಮೂಲಕ ನೂಲುವ ಮತ್ತು ನೇಯುವ ಉತ್ಪನ್ನಗಳ ಮೌಲ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ, 'ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ'ಕ್ಕೆ 'ಪೊಂಡೂರು ಖಾದಿ'ಗಾಗಿ ಭೌಗೋಳಿಕ ಸೂಚ್ಯಂಕ ಟ್ಯಾಗ್ ಅನ್ನು ಇತ್ತೀಚೆಗೆ ನೀಡಲಾಗಿದೆ. ಈ ವರ್ಷ ಆಗ್ರಾದಲ್ಲಿ ನಡೆದ ಉದ್ಘಾಟನಾ 'ಬ್ರಿಕ್ಸ್ ಎಂ.ಎಸ್.ಎಂ.ಇ. ವೇದಿಕೆ'ಯಲ್ಲಿ, ಜಿ.ಐ.–ಟ್ಯಾಗ್ ಪಡೆದ ಪೊಂಡೂರು ಖಾದಿ, ಭಾರತ್ ಕಸ್ತೂರಿ ಹತ್ತಿ, ಬಂಗಾಳ ಮಸ್ಲಿನ್ ಮತ್ತು ನೈಸರ್ಗಿಕ ಬಣ್ಣದ ಹತ್ತಿ ಉತ್ಪನ್ನಗಳಂತಹ ವಿಶೇಷ ಹಾಗೂ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪ್ರದರ್ಶಿಸಲಾಯಿತು.

ಹೊಸ ತಲೆಮಾರಿನ ಝೆನ್ ಜೀ ಗ್ರಾಹಕರನ್ನು ಹೊಂದಲು , ಉಳಿಸಿಕೊಳ್ಳಲು, ಮತ್ತು ಅಂತಹ ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯದ ಪ್ರತಿಫಲವನ್ನು ನೀಡಲು ನಮ್ಮ ಉತ್ಪನ್ನಗಳಲ್ಲಿ ಗುಣಮಟ್ಟ ಮತ್ತು ಭರವಸೆಯ ಖಾತ್ರಿಯನ್ನು ನಾವು ಖಚಿತಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ, ಸುಮಾರು ಮೂರುವರೆ ದಶಕಗಳ ಹಿಂದೆ ಸ್ಥಾಪಿಸಲಾದ ಇಲಾಖೆಯ ಸೆಂಟ್ರಲ್ ಸ್ಲಿವರ್ ಪ್ಲಾಂಟ್ ಅನ್ನು ಆಧುನೀಕರಿಸಲಾಗುತ್ತಿದೆ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಐದು ಸಿ.ಎಸ್.ಪಿ. ಗಳಲ್ಲಿ, ಕರ್ನಾಟಕದ ಚಿತ್ರದುರ್ಗ ಮತ್ತು ಕೇರಳದ ಕುತ್ತೂರಿನಲ್ಲಿರುವ ಸ್ಥಾವರಗಳು ಆಧುನೀಕರಣವನ್ನು ಪೂರ್ಣಗೊಳಿಸಿವೆ ಮತ್ತು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದ ಸ್ಲಿವರ್ ಪ್ಲಾಂಟ್ ತನ್ನ ಅಗತ್ಯದ ಇಂಧನದಲ್ಲಿ 50% ಅನ್ನು ಸೌರಶಕ್ತಿಯಿಂದ ಪಡೆದು ಬಳಸುತ್ತದೆ, ಆದರೆ ಉತ್ಪಾದನೆಯನ್ನು ಸಂಪೂರ್ಣವಾಗಿ ಪರಿಸರಕ್ಕೆ ಪೂರಕವಾಗಿಸಲು ಪವನ ಶಕ್ತಿಯನ್ನು ಅನ್ವೇಷಿಸಲಾಗುತ್ತಿದೆ. ಈ ವಿಧಾನವು ಸಾಂಪ್ರದಾಯಿಕ ಉದ್ಯಮಗಳನ್ನು ವಿನ್ಯಾಸ, ತಂತ್ರಜ್ಞಾನ, ಆಧುನಿಕ ಮಾರುಕಟ್ಟೆಗಳು ಮತ್ತು ವಿಕಸನಗೊಳ್ಳುತ್ತಿರುವ ಪೂರೈಕೆ ಸರಪಳಿಗಳೊಂದಿಗೆ ಸಂಪರ್ಕಿಸುವ ಮೂಲಕ ಎಸ್.ಡಿ.ಜಿ. 9 (ಉದ್ಯಮ, ನಾವೀನ್ಯತೆ ಮತ್ತು ಮೂಲಸೌಕರ್ಯ) ದೊಂದಿಗೆ ಪ್ರತಿಬಿಂಬಿಸುತ್ತದೆ. ಖಾದಿ ಸಂಸ್ಥೆಗಳ ಉತ್ಪಾದನಾ ಮೂಲಸೌಕರ್ಯ ಮತ್ತು ತಂತ್ರಜ್ಞಾನ ಆಧಾರಿತ ಸಾಮಾನ್ಯ ಸೌಲಭ್ಯ ಕೇಂದ್ರಗಳ ಉನ್ನತೀಕರಣವನ್ನು ಸಾಮೂಹಿಕ ಮೂಲಸೌಕರ್ಯ ಮತ್ತು ಆಧುನಿಕ ಸಂಸ್ಕರಣಾ ಸೌಲಭ್ಯಗಳ ಮೂಲಕ ಗ್ರಾಮ ಕೈಗಾರಿಕೆಗಳ ಸಮೂಹಗಳನ್ನು ಬಲಪಡಿಸಲು ಪ್ರಸ್ತಾಪಿಸಲಾಗಿದೆ. ಕೆ.ವಿ.ಐ.ಸಿ. ಮೌಲ್ಯ ಸರಪಳಿಗಳಲ್ಲಿ ಅಂಗೀಕಾರಾರ್ಹ ಪರಿಹಾರಗಳನ್ನು ಸಕ್ರಿಯಗೊಳಿಸುತ್ತಿದೆ, ಇದು ಐಟಿಯನ್ನು ಸಂಪ್ರದಾಯಕ್ಕೆ ಸಂಯೋಜಿಸಲು ಮತ್ತು ಉತ್ಪಾದನಾ ಪರಿಸರ ವ್ಯವಸ್ಥೆಯಲ್ಲಿ ಹೊಸ ತಲೆಮಾರಿನ ಆಸಕ್ತಿಯನ್ನು ಆಕರ್ಷಿಸಲು ಅನುವು ಮಾಡಿಕೊಡುತ್ತದೆ.

ಕೊನೆಯದಾಗಿ, ಗುಡಿ ಕೈಗಾರಿಕೆಯು ಪರಿಸರ ಸ್ನೇಹಿಯಾಗಿದ್ದು, ಇಂಧನ ದಕ್ಷತೆ, ನೀರಿನ ದಕ್ಷತೆ ಮತ್ತು ನೈಸರ್ಗಿಕ ನಾರುಗಳು/ಬಣ್ಣಗಳ ಬಳಕೆಯಿಂದಾಗಿ ಪರಿಸರ ಸ್ನೇಹಿಯಾಗಿದೆ. ಖಾದಿ ಪರಿಸರ ಸ್ನೇಹಿ ಬಟ್ಟೆಯಾಗಿದ್ದು, ಇದು ಕಡಿಮೆ ಇಂಗಾಲದ ಹೆಜ್ಜೆಗುರುತನ್ನು ಹೊಂದಿದೆ ಮತ್ತು ಪರಿಸರಕ್ಕೆ ಪೂರಕವಾಗಿದೆ. ಹೊಸ ಪೀಳಿಗೆಯ ದೇಶೀಯ ಮತ್ತು ಅಂತಾರಾಷ್ಟ್ರೀಯ ಗ್ರಾಹಕರಿಗೆ ಉತ್ಪನ್ನ ಮತ್ತು ಬ್ರಾಂಡ್ ಪ್ರಚಾರ ನಿರೂಪಣೆಯಲ್ಲಿ ಸೂಕ್ತವಾಗಿ ಅಂಶೀಕರಣವನ್ನು ಸಕ್ರಿಯಗೊಳಿಸಲು ಪ್ರಮುಖ ಸಂಸ್ಥೆಗಳು (ಐಐಟಿ, ಐಐಎಂಗಳು) ಇದರ ಮಾಪನವನ್ನು ಅಧ್ಯಯನ ಮಾಡುತ್ತಿವೆ. ಆರ್ಥಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ ಮತ್ತು ಪರಿಸರ ಅರ್ಥಗಳನ್ನು ಹೊಂದಿರುವ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ಹೆಚ್ಚು ಪ್ರಾಯೋಗಿಕ ವಿಧಾನದೊಂದಿಗೆ ಉಪಕ್ರಮಗಳನ್ನು ತೆಗೆದುಕೊಳ್ಳುವ ಕಡೆಗೆ ವಿಶ್ವ ಆರ್ಥಿಕತೆಗಳ ಗಮನವು ಇತ್ತೀಚೆಗೆ ಬದಲಾಗಿದೆ. ಪರಿಸರ ಕಾಳಜಿಗಳು, ಹೆಚ್ಚುತ್ತಿರುವ ಅಸಮಾನತೆಗಳು, ಹಸಿವು ಮತ್ತು ಬಡತನ ಮತ್ತು ಸಂಪನ್ಮೂಲಗಳ ಅಸಮಾನ ಹಂಚಿಕೆಯ ಹಿನ್ನೆಲೆಯಲ್ಲಿ ಭೌತಿಕ ವಿಸ್ತರಣೆಯ ನೈತಿಕ ಅಂಶಗಳು ನೀತಿ ನಿರೂಪಕರ ಗಮನವನ್ನು ಸೆಳೆದಿವೆ. 2015 ರಲ್ಲಿ ವಿಶ್ವ ರಾಷ್ಟ್ರಗಳು ಅಳವಡಿಸಿಕೊಂಡ 17 ಗುರಿಗಳೊಂದಿಗೆ ಸುಸ್ಥಿರ ಅಭಿವೃದ್ಧಿಗಾಗಿ 2030 ರ ಕಾರ್ಯಸೂಚಿಯು ಬಡತನ ನಿರ್ಮೂಲನೆ, ಪರಿಸರ ಸಂಪನ್ಮೂಲಗಳ ವಿವೇಚನಾಯುಕ್ತ ಬಳಕೆ ಮತ್ತು ವಿತರಣಾ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಅಭಿವೃದ್ಧಿಯನ್ನು ಸಾಧಿಸುವ ಕ್ರಮವನ್ನು ಹೇಳುತ್ತದೆ. ಕೆವಿಐಸಿ ಭಾರತೀಯ ಕೃಷಿ ಸಂಶೋಧನಾ ಮಂಡಳಿ–ಕೇಂದ್ರೀಯ ಹತ್ತಿ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಐಸಿಎಆರ್–ಸಿಐಆರ್ಸಿಒಟಿ) ಸಹಯೋಗದೊಂದಿಗೆ, ನೈಸರ್ಗಿಕವಾಗಿ ಬಣ್ಣದ ಹತ್ತಿ ಪ್ರಭೇದಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿರುವ ಉಪಕ್ರಮಗಳನ್ನು ಸಕ್ರಿಯವಾಗಿ ಅನ್ವೇಷಿಸುತ್ತಿದೆ. ಈ ವಿಧಾನವು ಸಾಂಪ್ರದಾಯಿಕ ಬಣ್ಣ ಹಾಕುವ ಪ್ರಕ್ರಿಯೆಗಳೊಂದಿಗೆ ಸಂಬಂಧಿಸಿದ ನೀರಿನ ಬಳಕೆ, ರಾಸಾಯನಿಕ ಮಾಲಿನ್ಯ ಮತ್ತು ಇಂಧನ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಪರಿಸರ ಸ್ನೇಹಿ ಅಭ್ಯಾಸಗಳೊಂದಿಗೆ ಹೊಂದಿಕೆಯಾಗುತ್ತದೆ. ಆದ್ದರಿಂದ ಸುಸ್ಥಿರ ಜೀವನೋಪಾಯ ಪರಿಹಾರಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರುವ ಈ ವಲಯಕ್ಕೆ ಉತ್ತೇಜನ ನೀಡುವುದು ಸೂಕ್ತ. ಫ್ಯಾಷನ್ ಉದ್ಯಮವು ತ್ಯಾಜ್ಯ, ಮಾಲಿನ್ಯ ಮತ್ತು ಅತಿಯಾದ ಸಂಪನ್ಮೂಲ ಬಳಕೆಯನ್ನು ಪರಿಹರಿಸಲು ಒತ್ತಡದಲ್ಲಿರುವ ಸಮಯದಲ್ಲಿ, ಖಾದಿ ಪರ್ಯಾಯ ತತ್ವಶಾಸ್ತ್ರವನ್ನು ನೀಡುತ್ತದೆ; –ಚಿಂತನಶೀಲವಾಗಿ ಉತ್ಪಾದಿಸಿ, ಜವಾಬ್ದಾರಿಯುತವಾಗಿ ಬಳಸಿ ಮತ್ತು ಪ್ರತಿ ಉತ್ಪನ್ನದ ಹಿಂದಿನ ಕೌಶಲ್ಯವನ್ನು ಗೌರವಿಸಿ. ವಾಸ್ತವವಾಗಿ, ಯಾಂತ್ರಿಕೃತ ನೂಲುವ ಉದ್ಯಮದಿಂದ ಸ್ವಭಾವತಃ (ಉದಾ. ಪ್ಲಾಸ್ಟಿಕ್ ಹೊದಿಕೆ) ಅಥವಾ ಉದ್ದ (ಉದಾ. ದೇಸಿ ಹತ್ತಿ) ಯಾವುದೇ ಫೈಬರ್ ಅಥವಾ ಫಿಲಮೆಂಟ್ ಅನ್ನು ನೂಲಾಗಿ ಪರಿವರ್ತಿಸಲು ಸಾಧ್ಯವಾಗದಿದ್ದರೆ, ಅದನ್ನು ಕೈ ಚರಕದ ಮೂಲಕ ಮಾಡಬಹುದು ಮತ್ತು 'ಇನ್ ಲೂಪ್' ಹಾಗೂ 'ಔಟ್ ಆಫ್ ಲೂಪ್' ಮರುಬಳಕೆ ಮತ್ತು ಅಪ್ಸೈಕ್ಲಿಂಗ್ ಅನ್ನು ಸಕ್ರಿಯಗೊಳಿಸಬಹುದು ಮತ್ತು ಆ ಮೂಲಕ ಕೈ ನೂಲುವಿಕೆ ಹೆಚ್ಚುವರಿ ಉದ್ಯೋಗ ವರ್ಗಗಳಿಗೆ ಕೊಡುಗೆ ನೀಡಬಹುದು.

ಇದು ಖಾದಿಯನ್ನು ನೇರವಾಗಿ ಎಸ್ಡಿಜಿ 12 (ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ) ಮತ್ತು ಎಸ್ಡಿಜಿ 13 (ಹವಾಮಾನ ಕ್ರಿಯೆ) ಗಳೊಂದಿಗೆ ಸಂಪರ್ಕಿಸುತ್ತದೆ. ಜವಾಬ್ದಾರಿಯುತ ಹತ್ತಿ ಕೃಷಿಯಂತಹ ಸುಸ್ಥಿರ ಕೃಷಿ ಪದ್ಧತಿಗಳು, ಹೆಚ್ಚು ಸುಸ್ಥಿರ ಗ್ರಾಮೀಣ ಪರಿಸರ ವ್ಯವಸ್ಥೆಗಳನ್ನು ಉತ್ತೇಜಿಸುವ ಮೂಲಕ ಎಸ್ಡಿಜಿ 2 (ಹಸಿವು ಮುಕ್ತ ಸ್ಥಿತಿ) ಮತ್ತು ಎಸ್ಡಿಜಿ 15 (ಭೂಮಿಯ ಮೇಲಿನ ಜೀವಸಂಕುಲ) ಕ್ಕೆ ನೀಡುವ ಕೊಡುಗೆಯನ್ನು ಇನ್ನಷ್ಟು ಬಲಪಡಿಸಬಲ್ಲವು. ಈ ಸಾಮರ್ಥ್ಯದೊಂದಿಗೆ, ನಿರಂತರ ಬೆಂಬಲ ಮತ್ತು ಪ್ರೋತ್ಸಾಹವು ಪೂರೈಕೆ ಸರಪಳಿಗಳನ್ನು ಬಲಗೊಳಿಸಿ, ದೃಢಗೊಳಿಸಿ ಮತ್ತು ವ್ಯಾಪಕವಾಗಿಸಿ ಮಾನವ ಕುಲಕ್ಕೆ ಜವಾಬ್ದಾರಿಯನ್ನು ನಿರ್ದೇಶಿಸುತ್ತಿರುತ್ತದೆ.

ಇದರಲ್ಲಿರುವ ವಿಸ್ತಾರವಾದ ದೊಡ್ಡ ಸಂದೇಶ ಬಹಳ ಸರಳವಾಗಿದೆ; ಸುಸ್ಥಿರತೆ, ಯಾವಾಗಲೂ ಹೊಸ ತಂತ್ರಜ್ಞಾನದಿಂದ ಮಾತ್ರವೇ ಬರಬೇಕಾಗಿಲ್ಲ. ಕೆಲವೊಮ್ಮೆ, ಅದು ಶತಮಾನಗಳಿಂದ ಸಂರಕ್ಷಿಸುತ್ತಿರುವ ಸಮುದಾಯಗಳು ಅಭ್ಯಾಸ ಪದ್ಧತಿಗಳಿಂದ ಹೊರಹೊಮ್ಮಬಹುದು, ಅದನ್ನು ಆಧುನಿಕ ಸಮಾಜ ಮರುಶೋಧಿಸುತ್ತದೆ. ಖಾದಿ ನಿಖರವಾಗಿ ಅಂತಹ ಸಾಧ್ಯತೆಯನ್ನು ಪ್ರತಿನಿಧಿಸುತ್ತದೆ. ಇದು ಪರಂಪರೆಯನ್ನು ನಾವೀನ್ಯತೆಯೊಂದಿಗೆ, ಉದ್ಯೋಗವನ್ನು ಉದ್ಯಮಶೀಲತೆಯೊಂದಿಗೆ, ಮಹಿಳಾ ಸಬಲೀಕರಣವನ್ನು ಸಾಮಾಜಿಕ ಸೇರ್ಪಡೆಯೊಂದಿಗೆ ಮತ್ತು ಆರ್ಥಿಕ ಚಟುವಟಿಕೆಯನ್ನು ಪರಿಸರ ಜವಾಬ್ದಾರಿಯೊಂದಿಗೆ ಸಂಯೋಜಿಸುತ್ತದೆ. ನಾವು, ಕಿ.ವಿ.ಐ.ಸಿ ಯಲ್ಲಿ, ಪರಿಸರದ ಬಗ್ಗೆ ಕಾಳಜಿಯುಳ್ಳ, ಪರಿಸರ ಪ್ರಜ್ಞೆಯ ಜಗತ್ತಿಗೆ, ನಮ್ಮ ನೇಯ್ಗೆಯ ಕಲಾವಿದರು, ನಮ್ಮ ನೂಲುವವರು ಮತ್ತು ಕುಶಲಕರ್ಮಿಗಳು ನೇಯ್ದ ಮ್ಯಾಜಿಕ್ ಅನಾವರಣ ಮಾಡಲು, ವಾಸ್ತವಿಕಗೊಳಿಸಲು, ಪುನರುಜ್ಜೀವನ ಮಾಡಲು ಮತ್ತು ಬಲಪಡಿಸಲು ಪ್ರಯತ್ನಿಸುತ್ತಿದ್ದೇವೆ.

## ಅಕ್ಟೋಬರ್ 17 ರಂದು ಬೆಸ್ಕಾಂನಿಂದ ಗ್ರಾಹಕ ಸಂವಾದ ಸಭೆ: ವಿದ್ಯುತ್ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಬೆಸ್ಕಾಂ ಕರೆ

ಬೆಂಗಳೂರು : ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ವ್ಯಾಪ್ತಿಯ ಎಲ್ಲಾ ಕಾರ್ಯ ಮತ್ತು ಪಾಲನಾ (ಔ&ಒ) ಉಪವಿಭಾಗಗಳಲ್ಲಿ 2026 ನೇ ಅಕ್ಟೋಬರ್ 17 ರಂದು ಗ್ರಾಹಕ ಸಂವಾದ ಸಭೆಯನ್ನು ಆಯೋಜಿಸಿದೆ.

ಸಾರ್ವಜನಿಕರಿಗೆ ಸೂಕ್ತ ವಿದ್ಯುತ್ ಸೇವೆ ಒದಗಿಸುವ ಹಾಗೂ ಗ್ರಾಹಕರ ದೂರುಗಳು/ಸಮಸ್ಯೆಗಳನ್ನು ನಿವಾರಿಸುವ ಉದ್ದೇಶದಿಂದ ಬೆಸ್ಕಾಂ ಪ್ರತಿ ತಿಂಗಳ ಮೂರನೇ ಶನಿವಾರದಂದು ಈ ಸಂವಾದ ಸಭೆಗಳನ್ನು ನಡೆಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ 2026 ನೇ ಅಕ್ಟೋಬರ್ 17 ರ ಶನಿವಾರ ಮಧ್ಯಾಹ್ನ 3:00 ರಿಂದ ಸಾಯಂಕಾಲ 5:30 ರವರೆಗೆ ಎಲ್ಲಾ ಉಪವಿಭಾಗೀಯ ಕಚೇರಿಗಳಲ್ಲಿ ಸಭೆ ನಡೆಯಲಿದೆ.

ವಿದ್ಯುತ್ ಪೂರೈಕೆ, ಬಿಲ್ಲಿಂಗ್, ನೂತನ ಸಂಪರ್ಕ ಹಾಗೂ ಇತರೆ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಎದುರಿಸುತ್ತಿರುವ ಗ್ರಾಹಕರು ಈ ಸಭೆಯಲ್ಲಿ ನೇರವಾಗಿ ಪಾಲ್ಗೊಂಡು ಬೆಸ್ಕಾಂ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚಿಸಿ, ತಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳಬಹುದಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕ ಬಾಂಧವರು ಈ ಅವಕಾಶವನ್ನು ಬಳಸಿಕೊಳ್ಳಬೇಕಾಗಿ ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

## ಅರಣ್ಯ ಅಧಿಕಾರಿ ಹಾಗೂ ಕಂದಾಯ ಇಲಾಖೆ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಲೋಕಾಯುಕ್ತರು



ಮಳವಳ್ಳಿ:ಅಧಿಕಾರಿಗಳು ಸಭೆಗೆ ಚರ್ಚೆ ಯಾಗಬೇಕಾದ ವಿಷಯ ಬಗ್ಗೆ ಯಾವ ದಾಖಲಾತಿ ತರದೆ ಬಂದ ಹಿನ್ನಲೆಯಲ್ಲಿ ಅರಣ್ಯ ಅಧಿಕಾರಿ ಹಾಗೂ ಕಂದಾಯ ಇಲಾಖೆ ಅಧಿಕಾರಿಯನ್ನು ಲೋಕಾಯುಕ್ತರು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು. ಮಳವಳ್ಳಿ ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನಡೆದ ಕರ್ನಾಟಕ ಲೋಕಾಯುಕ್ತ ಮಂಡ್ಯದ ವತಿಯಿಂದ ಸಾರ್ವಜನಿಕ ಅಹವಾಲು ದೂರು ಸ್ವೀಕಾರ ಮತ್ತು ಕುಂದುಕೊರತೆ ಸಭೆ ಮಂಡ್ಯ ಲೋಕಾಯುಕ್ತ ಎಸ್ ಪಿ ಸುರೇಶಬಾಬು ಅಧ್ಯಕ್ಷತೆ ನಡೆದ ಸಭೆಯಲ್ಲಿ ಬಿಜಿಪುರ ಹೋಬಳಿಗೆ ಸೇರಿದ ಜಾಗ ವಿಷಯದ ಬಗ್ಗೆ ಲೋಕಾಯುಕ್ತ ದೂರಿನ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗೆ ಮಾಹಿತಿ ಹೇಳಲು ಬಂದ ವೇಳೆ ಯಾವುದೇ ದಾಖಲೆಗಳನ್ನು ತರದೆ ಬಂದಿದ್ದು ಈ ಬಗ್ಗೆ ಲೋಕಾಯುಕ್ತ ಇನ್ಸ್ ಪೆಕ್ಟರ್ ಬ್ಯಾಟರಾಯಗೌಡರು ಅರಣ್ಯ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಇದೇ ವೇಳೆ ಸಾರ್ವಜನಿಕರ ದೂರುಗಳನ್ನು ಲೋಕಾಯುಕ್ತರು ಸ್ವೀಕರಿಸಿದರು. ಸಭೆಯಲ್ಲಿ ಲೋಕಾಯುಕ್ತ ಇನ್ಸ್ ಪೆಕ್ಟರ್ ರವಿಕುಮಾರ, ಬ್ಯಾಟರಾಯಗೌಡ ,ತಹಸೀಲ್ದಾರ್ ಲೋಕೇಶ್ ತಾಲ್ಲೂಕು ಪಂಚಾಯಿತಿ ಇಒ ಶ್ರೀನಿವಾಸ ಸೇರಿದಂತೆ ಹಲವರು ಇದ್ದರು.

# ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಚಿಕ್ಕರಾಜು ಎಸ್. ಯಾದವ್‌ಗೆ ಅಹಿಂದ ಸಂಘಟನೆ ಬೆಂಬಲ

ತುಮಕೂರು :ಆಗ್ನೇಯ ಪದವೀಧರ ಕ್ಷೇತ್ರ 2026ರ ಚುನಾವಣೆಯಲ್ಲಿ ಅಹಿಂದ ಸಂಘಟನೆಯ ಮುಖಂಡರಾದ ಚಿಕ್ಕರಾಜು ಎಸ್. ಯಾದವ್ ರವರು ಸ್ಪರ್ಧಿಸಿದ್ದು, ಅವರಿಗೆ ಆತ್ಮೀಯ ಪದವೀಧರ ಕ್ಷೇತ್ರದಾದ್ಯಂತ ಅಹಿಂದ ವರ್ಗವು ಸಂಪೂರ್ಣವಾಗಿ ಬೆಂಬಲವನ್ನು ನೀಡುತ್ತೇವೆ.



ಚಿಕ್ಕರಾಜು ಎಸ್. ಯಾದವ್ ರವರು ನಮ್ಮ ಸಂಘಟನೆಯಲ್ಲಿ ಹಲವಾರು ವರ್ಷಗಳಿಂದ ಪ್ರಧಾನ ಕಾರ್ಯದರ್ಶಿಯಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದು, ಅಹಿಂದ ವರ್ಗಗಳ ಏಳಿಗೆಗೆ ಶ್ರಮಿಸಿದ್ದಾರೆ. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಮನೋ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಕಾನೂನು ಪದವಿಯನ್ನು ಹೊಂದಿರುತ್ತಾರೆ. ಇವರು ಶಿಕ್ಷಣ ಕ್ಷೇತ್ರದಲ್ಲಿ ಉಪನ್ಯಾಸಕರಾಗಿ, ಆರೋಗ್ಯ ಕ್ಷೇತ್ರದಲ್ಲಿ ಆಪ್ತ ಸಮಾಲೋಚಕರಾಗಿ, ಕಾನೂನು ಕ್ಷೇತ್ರದಲ್ಲಿ ವಕೀಲರಾಗಿ ಕಾರ್ಯನಿರ್ವಹಿಸಿದ್ದು, ವಿದ್ಯಾರ್ಥಿಗಳು, ಪದವೀಧರರು. ಶಿಕ್ಷಕರು, ವಕೀಲರು, ವೈದ್ಯರೊಂದಿಗೆ ಉತ್ತಮವಾದ ಸಂಪರ್ಕವನ್ನು ಹೊಂದಿದ್ದು, ಎಲ್ಲಾ ಕ್ಷೇತ್ರಗಳಲ್ಲೂ ಹಲವಾರು ಸಾಧನೆಗಳನ್ನು ಮಾಡಿ ಹಲಬಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಇವರು ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿಕೊಂಡು 2005 ರಲ್ಲಿ ಎಬಿಪಿಜೆಡಿ (ಅಹಿಂದ) ಪಕ್ಷದಿಂದ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಹಾಗೂ ಗ್ರಾಮ ಪಂಚಾಯ್ತಿಯಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಮತ್ತು ರಾಜ್ಯದ ಅನೇಕ ಅಹಿಂದ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದು, ಅವರುಗಳ ಸಹಕಾರದೊಂದಿಗೆ ಇಂದು ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದು, ಈಗಾಗಲೇ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ದಾವಣಗೆರೆ ಜಿಲ್ಲೆ, ತುಮಕೂರು ಜಿಲ್ಲೆಯ ಅಹಿಂದ ನಾಯಕರುಗಳ ಮತ್ತು ಮತದಾರರ ಸಂಪರ್ಕದಲ್ಲಿದ್ದು, ಕಳೆದ ಒಂದು ವರ್ಷದಿಂದ ಪದವೀಧರ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿರುತ್ತಾರೆ.

ಆದ್ದರಿಂದ ಆಗ್ನೇಯ ಪದವೀಧರ ಕ್ಷೇತ್ರದ ಎಲ್ಲಾ ಅಹಿಂದ ಮುಖಂಡರು ಮತ್ತು ಪದವೀಧರರು ದಯವಿಟ್ಟು ಅಹಿಂದ ಸಿದ್ಧಾಂತಗಳನ್ನು ಒಳಗೊಂಡಿರುವ ನಮ್ಮ ಅಭ್ಯರ್ಥಿ ಚಿಕ್ಕರಾಜು ಎಸ್ ರವರಿಗೆ ಪ್ರಥಮ ಪ್ರಾಶಸ್ತ್ರದ ಮತ ನೀಡಿ ಅವರನ್ನು ಜಯಶೀಲರನ್ನಾಗಿ ಮಾಡಿ ಅಹಿಂದ ವರ್ಗಗಳ ಏಳಿಗೆಗೆ ಇನ್ನು ಹೆಚ್ಚಿನ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ನಮ್ಮ ಸಂಘಟನೆಯ ಪದಾಧಿಕಾರಿಗಳು ಹಾಗೂ ಅಲೆಮಾರಿ ಮತ್ತು ಅರೆ ಅಲೆಮಾರಿ ಮುಖಂಡರುಗಳೆಲ್ಲ ಸೇರಿ ಮಾಧ್ಯಮದವರ ಮೂಲಕ ಮನವಿ ಮಾಡಿದರು

# ತುಮಕೂರು ದಸರಾ ರಂಗ ನಾಟಕೋತ್ಸವದಲ್ಲಿ ಎರಡು ಪೌರಾಣಿಕ ನಾಟಕಗಳ ಪ್ರದರ್ಶನ

ತುಮಕೂರು: ವೈಭವದ ತುಮಕೂರು ದಸರಾ ಉತ್ಸವದ ಪ್ರಯುಕ್ತ ಜಿಲ್ಲಾಡಳಿತ, ತುಮಕೂರು ಹಾಗೂ ತುಮಕೂರು ಜಿಲ್ಲಾ ರಂಗಭೂಮಿ ಕಲಾವಿದರ ಸಂಘ (ರಿ) ಇವರ ಸಹಭಾಗಿತ್ವದಲ್ಲಿ ಆಯೋಜಿಸಿರುವ *ತುಮಕೂರು ರಂಗ ದಸರಾ ನಾಟಕೋತ್ಸವ-2026* ಅಂಗವಾಗಿ ಎರಡು ದಿನಗಳ ಕಾಲ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ.

ದಿನಾಂಕ 18-10-2026 ಭಾನುವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.30 ರವರೆಗೆ* ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀ ನಾಗಾರ್ಜುನ ಕಲಾಸಂಘ (ರಿ), ತುಮಕೂರು* ಇವರಿಂದ *"ಮೂರುವರೆ ವಜ್ರಗಳು"* ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ. ಈ ನಾಟಕದ ಪ್ರಮುಖ ಪಾತ್ರದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಹನುಮಂತರಾಜು ರವರು ಅಭಿನಯಿಸಲಿದ್ದಾರೆ.

ದಿನಾಂಕ 20-10-2026 ಮಂಗಳವಾರ ಸಂಜೆ 3.00 ರಿಂದ 7.00 ರವರೆಗೆ* *ಶ್ರೀ ರಾಮಾಂಜನೇಯ ಕಲಾಸಂಘ, ಕೋರಾ-ಬ್ರಹ್ಮಸಂದ್ರ* ತಂಡದಿಂದ "ಶ್ರೀಕೃಷ್ಣನ ಶಾಂತಿ ಸಂದೇಶ" ಎಂಬ ಪೌರಾಣಿಕ ನಾಟಕ ಪ್ರದರ್ಶನಗೊಳ್ಳಲಿದೆ. ಇದರ ಸಂಗೀತ ನಿರ್ದೇಶನವನ್ನು ಅಂಚೆ ಇಲಾಖೆಯ ಮಲ್ಲೇಕಾವು ಎಂ.ಡಿ.ಪ್ರಕಾಶ್ ರವರು ನಿರ್ವಹಿಸಲಿದ್ದಾರೆ.

ಎರಡೂ ನಾಟಕಗಳಲ್ಲಿ ಕೊರಟಗೆರೆ, ತುಮಕೂರು ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಗಳ ಸರ್ಕಾರಿ ನೌಕರ ಕಲಾವಿದರಾದ ತಿಪ್ಪೇಸ್ವಾಮಿ, ರಂಗನಾಥ್, ನರಸಿಂಹರಾಜು, ರಮೇಶ್, ನಾಗೇಶ್, ಚಂದ್ರಕಾಂತ್, ಬಸವರಾಜು, ಕುಮಾರ್, ನರಸಿಂಹರಾಜು, ವಿಜಯಕುಮಾರ್, ಸೋಮಶೇಖರ್, ರಾಜಣ್ಣ, ಸಿದ್ದರಾಜು, ವಸಂತಕುಮಾರ್ ಸೇರಿದಂತೆ ಹಲವಾರು ಕಲಾವಿದರು ಪಾತ್ರವಹಿಸಲಿದ್ದಾರೆ.

ಸ್ತ್ರೀ ಪಾತ್ರಗಳಲ್ಲಿ ರುಕ್ಮಿಣಿ, ಮಂದಿರ, ದ್ರೌಪದಿ ತಾರಾ ತುಮಕೂರು, ಸತ್ಯವತಿ ಭಾರತಿ ಬೆಂಗಳೂರು, ರುಕ್ಮಿಣಿ, ಉತ್ತರೆ, ನೃತ್ಯ ಭಾನುಪ್ರಿಯ ಬೆಂಗಳೂರು, ದ್ರೌಪದಿ ನೃತ್ಯ ತಾರಾ ತುಮಕೂರು ರವರು ಅಭಿನಯಿಸಲಿದ್ದಾರೆ.

ವಾದ್ಯದಲ್ಲಿ ತಬಲಾ - ಗುಂಡಣ್ಣ ಮಂಡ್ಯ, ದೇವರಾಜು ಯಲ್ಲಾಪುರ ಹಾಗೂ ಕ್ಯಾಸಿಯೋ - ಸೂರ್ಯ ಮಾನಂಗಿ ರವರು ಸಹಕರಿಸಲಿದ್ದಾರೆ.

ನಾಟಕೋತ್ಸವದ ಎಲ್ಲಾ ಪ್ರದರ್ಶನಗಳಿಗೂ ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

# ತೊಂಡೇಭಾವಿ ಜಿ.ಪಂ. ಕ್ಷೇತ್ರದಲ್ಲಿ ರಾಧಮ್ಮ ಹೆಸರು ಚರ್ಚೆಯಲ್ಲಿ

### ಹಿಂದುಳಿದ ವರ್ಗ ?ಎ? ಮಹಿಳೆಗೆ ಮೀಸಲಾತಿ: ಅಭ್ಯರ್ಥಿಗಳ ಆಯ್ಕೆ ಕುರಿತು ರಾಜಕೀಯ ವಲಯದಲ್ಲಿ ಕುತೂಹಲ

ಗೌರಿಬಿದನೂರು: ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದ ಮೀಸಲಾತಿ ಪಟ್ಟಿ ಪ್ರಕಟವಾಗಿದ್ದು, ತೊಂಡೇಭಾವಿ ಜಿಲ್ಲಾ ಪಂಚಾಯಿತಿ ಕ್ಷೇತ್ರವು ಹಿಂದುಳಿದ ವರ್ಗ ?ಎ? ಮಹಿಳೆಗೆ ಮೀಸಲಾಗಿರುವ ಹಿನ್ನೆಲೆಯಲ್ಲಿ ಕ್ಷೇತ್ರದ ರಾಜಕೀಯ ವಲಯದಲ್ಲಿ ಚರ್ಚೆಗಳು ಆರಂಭವಾಗಿವೆ.

ತೊಂಡೇಭಾವಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಜನರು ತಮ್ಮ ಸಮಸ್ಯೆಗಳಿಗೆ ಸ್ಪಂದಿಸುವ, ಬಡವರ ಪರವಾಗಿ ನಿಲ್ಲುವ, ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡುವ ಹಾಗೂ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುವ ಜನಪ್ರತಿನಿಧಿಯ ಆಯ್ಕೆಯ ನಿರೀಕ್ಷೆಯಲ್ಲಿದ್ದಾರೆ. ಈ ನಡುವೆ, ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಆರ್. ಸಂದೀಪ್ ಯಾದವ್ ಅವರ ತಾಯಿ ರಾಧಮ್ಮ ಅವರ ಹೆಸರು ಸಂಭಾವ್ಯ ಅಭ್ಯರ್ಥಿಯಾಗಿ ಸ್ಥಳೀಯ ರಾಜಕೀಯ ವಲಯದಲ್ಲಿ ಪ್ರಸ್ತಾಪವಾಗುತ್ತಿದೆ.



ಆರ್. ಸಂದೀಪ್ ಯಾದವ್ ಅವರು ಈ ಹಿಂದೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದು, ಶಾಸಕ ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಬಣದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದಾರೆ. ಕ್ಷೇತ್ರದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಜನರೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬುದು ಅವರ ಬೆಂಬಲಿಗರ ಅಭಿಪ್ರಾಯವಾಗಿದೆ.

ಈ ಹಿನ್ನೆಲೆಯಲ್ಲಿ, ಮೀಸಲಾತಿಗೆ ಅನುಗುಣವಾಗಿ ರಾಧಮ್ಮ ಅವರು ತೊಂಡೇಭಾವಿ ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಸ್ಪರ್ಧಿಸಬಹುದು ಎಂಬ ಚರ್ಚೆಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

ಜನರ ನಿರೀಕ್ಷೆ ಅಭಿವೃದ್ಧಿ ಮತ್ತು ಜನಸೇವೆ

ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾಗಿ ಕಣಕ್ಕಿಳಿದರೂ, ಕ್ಷೇತ್ರದ ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿ, ಕುಡಿಯುವ ನೀರು, ರಸ್ತೆ, ಚರಂಡಿ, ಶಿಕ್ಷಣ, ಆರೋಗ್ಯ ಹಾಗೂ ಬಡ ಮತ್ತು ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಸಾಮರ್ಥ್ಯವೇ ಪ್ರಮುಖ ಮಾನದಂಡವಾಗಬೇಕು ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಒಟ್ಟಿನಲ್ಲಿ, ತೊಂಡೇಭಾವಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಮೀಸಲಾತಿ ಪ್ರಕಟವಾಗಿರುವುದು ಸ್ಥಳೀಯ ರಾಜಕೀಯ ಚಟುವಟಿಕೆಗಳಿಗೆ ಹೊಸ ಚೈತನ್ಯ ನೀಡಿದ್ದು, ಮುಂದಿನ ದಿನಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ಬೆಳವಣಿಗೆಗಳು ಕ್ಷೇತ್ರದ ರಾಜಕೀಯ ಚಿತ್ರಣವನ್ನು ನಿರ್ಧರಿಸಲಿವೆ.

# ಗೌರಿವಲ್ಲಭೇಶ್ವರ ಸ್ವಾಮಿ ದೇಗುಲದಲ್ಲಿ ಸಂಪ್ರದಾಯಬದ್ಧ ನವರಾತ್ರಿ ಆಚರಣೆ

ಗೌರಿಬಿದನೂರು - ಇಲ್ಲಿನ ಐತಿಹಾಸಿಕ ದೇವಾಲಯ ಶ್ರೀ ಗೌರಿವಲ್ಲಭೇಶ್ವರ ಸ್ವಾಮಿ ದೇಗುಲದಲ್ಲಿ ನವರಾತ್ರಿ ಮಹೋತ್ಸವವನ್ನು ಅತ್ಯಂತ ಸಾಂಪ್ರದಾಯಕವಾಗಿ ಆಚರಿಸಲಾಯಿತು.



ನವರಾತ್ರಿಯ ಮೂರನೇ ದಿನವಾದ ಮಂಗಳವಾರದಂದು ಪೂಜೆಯ ನಂತರ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ದೇಗುಲದ ಪ್ರಧಾನ ಅರ್ಚಕ ಅನಂತಶರ್ಮ ರವರು ಬ್ರಹ್ಮಚಾರಿಣಿಯಾಗಿ ಶಿವನನ್ನು ಪತಿಯಾಗಿ ಪಡೆಯಲು ಚಂದ್ರಘಂಟಾಳು ಮಾಡಿದ ತಪಸ್ಸನ್ನು ಮೆಚ್ಚಿದ ಶಿವನು ವಿವಾಹವಾಗಲು ಒಪ್ಪಿಕೊಳ್ಳುತ್ತಾನೆ, ಹೀಗಾಗಿ ಮೂರನೇ ದಿನದಂದು ಪೂಜಿಸಲ್ಪಡುವ ದುರ್ಗಾದೇವಿಯ ತೃತೀಯ ಅವತಾರವೇ ಚಂದ್ರಘಂಟಾ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಗೌರಿವಲ್ಲಭೇಶ್ವರನಿಗೆ ಪುರೋಹಿತ ರಾದ ನಾಗರಾಜ್, ಚಂದ್ರುಶರ್ಮ, ನಾಗೇಂದ್ರ ಶರ್ಮರವರುಗಳು ವಿಶೇಷವಾಗಿ ಮಾಡಿದ್ದ ನಾಣ್ಯಗಳ ಅಲಂಕಾರ ಆತ್ಯಾಕರ್ಷಣೆಯಾಗಿತ್ತು, ಸೇವಾಕರ್ತರಾದ ಶ್ರೀಮತಿ ಚೌಡೇಶ್ವರಿ, ಡಾ.ಆನಂದಬಾಬು, ರವಿ ಸೇರಿದಂತೆ ಹಲವರಿದ್ದರು.

# ಕೊಳ್ಳೇಗಾಲಕ್ಕೆ ಧಮ್ಮಾ ಜನಜಾಗೃತಿ ಯಾತ್ರೆ ಆಗಮನ ಪ್ರಚಾರ ರಥಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಅದ್ದೂರಿ ಸ್ವಾಗತ



ಕೊಳ್ಳೇಗಾಲ.ಆ.13.ಪಟ್ಟಣಕ್ಕೆ ಆಗಮಿಸಿದ್ದ ಕರ್ನಾಟಕ ಧಮ್ಮಾ ಜನಜಾಗೃತಿ ಯಾತ್ರೆ ಪ್ರಚಾರ ರಥವನ್ನು ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಅದ್ದೂರಿಯಾಗಿ ಸ್ವಾಗತಿಸಿದರು.

ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ನಡೆಸಿ, ಪ್ರಚಾರ ರಥದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಪ್ರವಾಸಿ ಮಂದಿರದಲ್ಲಿ ಅಂತರರಾಷ್ಟ್ರೀಯ ಬೌದ್ಧ ಯುವ ಸಂಘಟನೆ ಇಂಡಿಯಾ ರಾಷ್ಟ್ರೀಯ ಅಧ್ಯಕ್ಷರು ಮಾಂಕ್ ಡಾ.ಶಾಕು ಬೋಧಿಧಮ್ಮ ಹಾಗೂ ಭಿಕ್ಕುಗಳಿಗೆ ಶಾಸಕರು ಗೌರವ ಅಭಿನಂದಿಸಿ, ಚಾ.ನಗರದಲ್ಲಿ ನಡೆಯುವ ಬೌದ್ಧ ಸಮ್ಮೇಳನದ ಆಹ್ವಾನ ಪತ್ರಿಕೆ ನೀಡಿ ಆಹ್ವಾನಿಸಿದರು.ಈ ಸಂಧರ್ಭದಲ್ಲಿ ಮುಖಂಡರು ಮುಳ್ಳೂರು ಶಿವಮಲ್ಲ, ನಟರಾಜು ಮಾಳಿಗೆ, ನಗರಸಭೆ ಮಾಜಿ ಅಧ್ಯಕ್ಷರು ಸೆಲ್ವರಾಜು, ಬಸ್ತೀಪುರ ಶಾಂತರಾಜು, ಮಾಜಿ ಸದಸ್ಯರು ಹಾಗೂ ಇತರರು ಇದ್ದರು.

# ಕಂದಿಕೆರೆ ಜಿಪಂ ಕ್ಷೇತ್ರಕ್ಕೆ ಜೆಡಿಎಸ್‌ನಿಂದ ಶ್ರೀನಿವಾಸ್ ಆಕಾಂಕ್ಷಿ

### ಎತ್ತಿನಹೊಳೆ, ಹೇಮಾವತಿ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಒತ್ತು; ಗ್ರಾಮೀಣ ಕ್ರೀಡಾಭಿವೃದ್ಧಿಗೆ ಆದ್ಯತೆ

ಚಿಕ್ಕನಾಯಕನಹಳ್ಳಿ: ತಾಲೂಕಿನ ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಶ್ರೀನಿವಾಸ್ ಆಕಾಂಕ್ಷೆ ಹೊಂದಿದ್ದಾರೆ. ಕಳೆದ 20 ವರ್ಷಗಳಿಂದ ಜೆಡಿಎಸ್ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅವರು, 2023ರಲ್ಲಿ ಪಕ್ಷದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ.



ಪಕ್ಷದ ಸಂಘಟನೆಯಲ್ಲಿ ದೀರ್ಘಕಾಲದಿಂದ ತೊಡಗಿಸಿಕೊಂಡಿರುವ ಶ್ರೀನಿವಾಸ್ ಅವರು ರಾಜಕೀಯ ಚಟುವಟಿಕೆಗಳ ಜತೆಗೆ ಸಾಮಾಜಿಕ ಸೇವೆ ಹಾಗೂ ಕ್ರೀಡಾಭಿವೃದ್ಧಿಯಲ್ಲಿಯೂ ಆಸಕ್ತಿ ಹೊಂದಿದ್ದಾರೆ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಆರ್ಥಿಕವಾಗಿ ಹಿಂದುಳಿದ ನೂರಾರು ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದರ ಜತೆಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿ, ಅವರ ಶಿಕ್ಷಣಕ್ಕೆ ನೆರವಾಗಿದ್ದರು.

ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ ಕೃಷಿ ಹಾಗೂ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಎತ್ತಿನಹೊಳೆ ಮತ್ತು ಹೇಮಾವತಿ ನೀರಾವರಿ ಯೋಜನೆಗಳ ಕಾಮಗಾರಿಗಳು ಮತ್ತಷ್ಟು ವೇಗ ಪಡೆದುಕೊಳ್ಳಬೇಕು ಎಂಬುದು ಶ್ರೀನಿವಾಸ್ ಅವರ ಆಶಯವಾಗಿದೆ. ಯೋಜನೆಗಳ ಪ್ರಯೋಜನ ಕ್ಷೇತ್ರದ ರೈತರು ಹಾಗೂ ಗ್ರಾಮಸ್ಥರಿಗೆ ತಲುಪಬೇಕು. ಕೆರೆಗಳಿಗೆ ನೀರು ತುಂಬಿಸುವ ಮೂಲಕ ಅಂತರ್ಜಲ ಮಟ್ಟ ಸುಧಾರಿಸುವುದು ಮತ್ತು ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವುದು ಅಗತ್ಯ ಎಂಬ ಅಭಿಪ್ರಾಯ ಹೊಂದಿದ್ದಾರೆ.

ಗ್ರಾಮೀಣ ಯುವಕರ ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಶ್ರೀನಿವಾಸ್ ಅವರು ಕ್ರಿಕೆಟ್ ಟೂರ್ನಿಗಳಿಗೆ ಆರ್ಥಿಕ ನೆರವು ನೀಡಿದ್ದಾರೆ. ಕಂದಿಕೆರೆ ಕ್ಷೇತ್ರದ ಗ್ರಾಮಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಹೆಚ್ಚಿನ ಒತ್ತು ನೀಡಬೇಕು.

ಇದರಿಂದ ಯುವಕರಿಗೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹಾಗೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ದೊರೆಯಲಿದೆ ಎಂಬ ಆಶಯ ಹೊಂದಿದ್ದಾರೆ.

ಶ್ರೀನಿವಾಸ್ ಅವರ ತಂದೆ ಚಿಕ್ಕ ಓಬಳಯ್ಯ ಅವರು ಕೆಇಬಿ ಗುತ್ತಿಗೆದಾರರಾಗಿ ಸೇವೆ ಸಲ್ಲಿಸಿದ್ದರು. ಎರಡು ದಶಕಗಳ ಪಕ್ಷದ ಒಡನಾಟ, 2023ರಲ್ಲಿ ಕಾರ್ಯದರ್ಶಿಯಾಗಿ ನಿರ್ವಹಿಸಿದ ಜವಾಬ್ದಾರಿ ಹಾಗೂ ಸಾಮಾಜಿಕ ಸೇವೆಯ ಹಿನ್ನೆಲೆಯೊಂದಿಗೆ ಶ್ರೀನಿವಾಸ್ ಅವರು ಕಂದಿಕೆರೆ ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್‌ನ ಆಕಾಂಕ್ಷಿಯಾಗಿದ್ದಾರೆ. ಪಕ್ಷದ ವರಿಷ್ಠರು ಅಭ್ಯರ್ಥಿ ಆಯ್ಕೆ ಕುರಿತು ಕೈಗೊಳ್ಳುವ ನಿರ್ಧಾರದತ್ತ ರಾಜಕೀಯ ವಲಯದ ಗಮನ ನೆಟ್ಟಿದೆ.

# ಕೊಳ್ಳೇಗಾಲದಲ್ಲಿ ಗಾಂಧಿ ಸ್ಮರಣೆ, ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮ




ಕೊಳ್ಳೇಗಾಲ.ಆ.13. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ (ರಿ) ಚಾಮರಾಜನಗರ ಜಿಲ್ಲೆ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್(ರಿ) ಜಿಲ್ಲಾ ಜನಜಾಗೃತಿ ವೇದಿಕೆ ಚಾಮರಾಜನಗರ ಇವರ ವತಿಯಿಂದ ಪರಮಪೂಜ್ಯ, ಪದ್ಮ ವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಮಾತೃ ಶ್ರೀ ಡಾ. ಹೇಮಾವತಿ ವೀ. ಹೆಗ್ಗಡೆಯವರ ಶುಭಾಶೀರ್ವಾದಗಳೊಂದಿಗೆ ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು,

ಪಟ್ಟಣದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಕೊಳ್ಳೇಗಾಲ ಶಾಸಕರಾದ ಎ. ಆರ್. ಕೃಷ್ಣಮೂರ್ತಿಯವರು ದೀಪ ಬೆಳಗಿಸಿ ಮಂಜುನಾಥ ಸ್ವಾಮಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಶಾಸಕರು ಮಾತನಾಡಿ, ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಧರ್ಮಸ್ಥಳದ ಶ್ರೀಗಳಾದ ವೀರೇಂದ್ರ ಹಗ್ಗಡೆಯವರು ಕ್ಷೇತ್ರ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಅನೇಕ ಮಹಿಳಾ ಸಂಘಟನೆಗಳನ್ನು ಸ್ಥಾಪನೆ ಮಾಡಿಸಿ ಮಹಿಳೆಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸಿಕೊಡುವ ಮೂಲಕ ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಹಾಗೂ ಮಹಿಳೆಯರ ಸಬಲೀಕರಣಕ್ಕೆ ನೆರವನ್ನು ನೀಡುತ್ತಾ ಸಹಕಾರವನ್ನು ಮಾಡುತ್ತಾ ಬಂದಿದ್ದಾರೆ

ಸುಮಾರು 36 ಜಿಲ್ಲೆಗಳಲ್ಲಿ ಸಂಘಟನೆ ತನ್ನ ಕಾರ್ಯಕ್ರಮವನ್ನು ಮಾಡಿಸುತ್ತ ಬಂದಿದ್ದಾರೆ ಅದೆ ರೀತಿ. ಹಲವಾರು ಜನರು ಯುವಕರ ಸಹಿತ ಕುಡಿತದಿಂದ ದುಶ್ಚಟಗಳಿಗೆ ದಾಸರಾಗಿ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಅದ್ದರಿಂದ ಜನರನ್ನು ವ್ಯಸನ ಮುಕ್ತರನ್ನಾಗಿ ಮಾಡಿ ಉತ್ತಮ ಸಮಾಜವನ್ನು ನಿರ್ಮಾಣವನ್ನು ಮಾಡಲು ಸಾರ್ಥಕ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು

ಆದ್ದರಿಂದ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು, ಶ್ರೀ ಕ್ಷೇತ್ರ ಧರ್ಮಸ್ಥಳ ಕ್ಷೇಮಾಭಿವೃದ್ದಿ ಸಂಘಟನೆ ವತಿಯಿಂದ ಗಾಂಧಿ ಸ್ಮರಣೆ ಮತ್ತು ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮವನ್ನು ನಡೆಸುತ್ತಿರವುದು ಜನರ ಹಿತದೃಷ್ಟಿಯಿಂದ ತುಂಬಾ ಉತ್ತಮ ಕಾರ್ಯಕ್ರಮವಾಗಿದೆ ಇದರಿಂದ ಜನರು ವ್ಯಸನ ಮುಕ್ತರಾಗಿ ಉತ್ತಮ ಜೀವನ ನಡೆಸಲು ದಾರಿ ದೀಪವಾಗಿದೆ, ಸರ್ಕಾರದಿಂದಲೂ ಕೂಡ ದುಶ್ಚಟಗಳ ಬಗ್ಗೆ ಅರಿವನ್ನು ಮೂಡಿಸಿ ವ್ಯಸನ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ ಅದರಂತೆ ಮಹಿಳೆಯರನ್ನು ಸಂಘಟನೆಗೆ ಸೇರ್ಪಡೆ ಮಾಡಿಕೊಂಡು ಅವರಿಗೆ ಸಾಲ ಸೌಲಭ್ಯಗಳನ್ನು ಕೊಟ್ಟು ನಂತರ ಮರುಪಾವತಿ ಮಾಡಿಕೊಳ್ಳುವ ಮೂಲಕ ಸಂಘವನ್ನು ಅಭಿವೃದ್ಧಿ ಪಡಿಸುವ ಜೊತೆಗೆ ಮಹಿಳೆಯರ ಸಬಲೀಕರಣಕ್ಕೆ ದಾರಿಯಾಗಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು

ಈ ಕಾರ್ಯಕ್ರಮದಲ್ಲಿ ಮುಡಿಗುಂಡ ವಿರಕ್ತಮಠದ ಶ್ರೀಕಂಠಸ್ವಾಮೀಜಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ರಾಜೇಂದ್ರ, ಎಚ್ ಕೆ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಪ್ರೇಮಲತಾ ಕೃಷ್ಣಸ್ವಾಮಿ

ಜಿಲ್ಲಾ ನಿರ್ದೇಶಕರು ದಿನೇಶ್, ಯೋಜನಾಧಿಕಾರಿ ದೀನರಾಜ್ ಶೆಟ್ಟಿ, ಜಿಲ್ಲಾ ಯೋಜನಾಧಿಕಾರಿಗಳು, ರವಿಚಂದ್ರ, ವಸಂತ, ಚಂದ್ರಶೇಖರ, ಶಶಿಕುಮಾರ್, ಆನಂದ್, ಜನಜಾಗೃತಿ ಅಧ್ಯಕ್ಷ ಎಚ್ ಎಂ. ಪ್ರಸಾದ್ ಹೊರದಹಳ್ಳಿ, ಪ್ರಾದೇಶಿಕ ನಿರ್ದೇಶಕ ಯೋಗೇಶ್, ಘಾಸಿ ಹಜರತ್ ಇಮಾಮ್ ಮೊಹಬೂಬಿಯ,

ಜೋಶುವ ಪ್ರಸನ್ನಕುಮಾರ್, ಚಿಕ್ಕಮಾದನಾಯಕ, ಹಾಗೂ ಇನ್ನಿತರರು ಇದ್ದರು

## ಫಾಸ್ಟ್ ಫುಡ್ ತರಬೇತಿಗಾಗಿ ಅರ್ಜಿ ಅಹ್ವಾನ

ಬೆಂಗಳೂರು ನಗರ ಜಿಲ್ಲೆ, (ಕರ್ನಾಟಕ ವಾರ್ತೆ): ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಫಾಸ್ಟ್ ಫುಡ್ ತಯಾರಿಕೆ ಕುರಿತು 12 ದಿನಗಳ ಉಚಿತ ತರಬೇತಿಯನ್ನು ಅಕ್ಟೋಬರ್ 22, ರಿಂದ ಪ್ರಾರಂಭವಾಗಲಿದ್ದು, ಆಸಕ್ತ ಗ್ರಾಮೀಣ ನಿರುದ್ಯೋಗಿ ಯುವಕ-ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್ ಕಾರ್ಡ್ ಅಥವಾ ಜಾಬ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ನ್ನು ಕಡ್ಡಾಯವಾಗಿ ಹೊಂದಿರುವ ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

## ಏಳು ಜಿಲ್ಲಾ ಪಂಚಾಯಿತ್ತಿ ಕ್ಷೇತ್ರಗಳನ್ನು ಗೆಲ್ಲುವ ವಿಶ್ವಾಸ : ಹರಿನಾಥ್ ರೆಡ್ಡಿ



ಗುಡಿಬಂಡೆ : ಆ 13 ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿನ ಏಳು ಜಿಲ್ಲಾ ಪಂಚಾಯಿತ್ತಿ ಕ್ಷೇತ್ರಗಳಲ್ಲಿ ನಮ್ಮ ಎನ್ ಡಿ ಎ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿ ಏಳು ಜಿಲ್ಲಾ ಪಂಚಾಯಿತ್ತಿ ಕ್ಷೇತ್ರಗಳನ್ನು ಗೆಲ್ಲಿಸಿಕೊಂಡು ಬರುವಂತಹ ಭರವಸೆ ನಮಗೆ ಇದೆ ಎಂದು ಎನ್ ಡಿ ಎ ನಾಯಕ ಹರಿನಾಥ್ ರೆಡ್ಡಿಯವರು ಭರವಸೆಯನ್ನು ವ್ಯಕ್ತಪಡಿಸಿದರು.

ತಾಲೂಕಿನ ಉಲ್ಲೋಡು ಗ್ರಾಮ ಪಂಚಾಯಿತ್ತಿಯ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಪ್ರವಾಸ ಎನ್ ಡಿ ಎ ಕಾರ್ಯಕರ್ತರನ್ನು ಭೇಟಿ ಮಾಡಿ ಬೂತ್ ಮಟ್ಟದ ಕಾರ್ಯಕರ್ತರ ಪಟ್ಟಿಗಳನ್ನು ಮಾಡಿ ಕಾರ್ಯಕರ್ತರ ಜೊತೆ ಸಭೆಯನ್ನು ಮಾಡಿ ಎನ್ ಡಿ ಎ ನಾಯಕ ಹರಿನಾಥ್ ರೆಡ್ಡಿ ಯವರು ಸುದ್ದಿಗಾರರೊಂದಿಗೆ ಮಾತನಾಡಿದರು. ಎನ್ ಡಿ ಎ ಮೈತ್ರಿಯಲ್ಲಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತ್ತಿ ತಾಲೂಕು ಪಂಚಾಯಿತ್ತಿಯಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿ ಎಲ್ಲಾ ನಾಯಕರು ನಾವು ವಿಶ್ವಾಸದಿಂದ ಕೆಲಸ ಮಾಡಲು ಬದ್ದರಾಗಿದ್ದೇವೆ.

ಹೈಕಮಾಂಡ್ ನಮ್ಮ ಕ್ಷೇತ್ರದಲ್ಲಿನ ಎಲ್ಲಾ ನಾಯಕರ ಜೊತೆ ಸಭೆ ಮಾಡಿ ಮಾತನಾಡಿದ್ದಾರೆ. ಜೊತೆಗೆ ಸಂಸದ ಡಾ.ಕೆ ಸುಧಾಕರ್ ಹಾಗೂ ಕೇಶವರೆಡ್ಡಿಯವರ ಮಾರ್ಗದರ್ಶನದಲ್ಲಿ ನಾವು ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳನ್ನು ಗೆಲ್ಲುವಂತಹ ಭರವಸೆ ನಮಗೆ ಇದೆ.ಹಾಗೇ ಬಾಗೇಪಲ್ಲಿ ಕ್ಷೇತ್ರದಲ್ಲಿ ಹದಿನೈದು ವರ್ಷಗಳಿಂದ ಕಾಂಗ್ರೆಸ್ ಬೇರುಬಿಟ್ಟುಕೊಂಡಿದೆ.ಆ?ದದರಿಂದ ಈ ಬಾರಿ ಅವರನ್ನ ನಿರ್ನಾಮ ಮಾಡೇ ಮಾಡುತ್ತೇವೆ ಎಂದು ಅವರು ವಿಶ್ವಾಸವನ್ನು ವ್ಯಕ್ತಪಡಿಸಿದರು.

ಗ್ರಾಮ ಪಂಚಾಯಿತ್ತಿಯಲ್ಲಿ ಯುವಕರು ಸೇರಿದ್ದಂತೆ ಎಲ್ಲಾರು ವಿಶ್ವಾಸದಿಂದ ಬರಮಾಡಿಕೊಳ್ಳುತ್ತೀದ್ದಾರೆ.ಎಲ್ಲಾರು ಒಳ್ಳೆಯ ವಿಶ್ವಾಸವನ್ನು ವ್ಯಕ್ತಪಡಿಸುತ್ತೀದ್ದಾರೆ. ಈ ಬಾರಿ ಸ್ಥಳೀಯ ಚುನಾವಣೆಯಲ್ಲಿ ನಮ್ಮ ಎನ್ ಡಿ ಎ ಗೆ ಬಾರಿ ವಿಶ್ವಾಸವನ್ನು ವ್ಯಕ್ತಪಡಿಸುವಂತಹ ಎಲ್ಲಾ ಲಕ್ಷಣಗಳು ಸಹ ಕಾಣುತ್ತೀವೆ ನಾವು ಈ ಬಾರಿ ಸ್ಥಳೀಯ ಚುನಾವಣೆಯಲ್ಲಿ ಗೆದ್ದು ಕ್ಷೇತ್ರವನ್ನು ಅಭಿವೃದ್ಧಿ ಮಾಡಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎಂದು ಭರವಸೆಯನ್ನು ವ್ಯಕ್ತಪಡಿಸಿದರು.

ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಗ್ರಾಮ ದೇವತೆಯಾದ ಶ್ರೀ ಮಲ್ಲಗಂಗಮ್ಮ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿ, ನಾಡಿನ ಹಾಗೂ ಕ್ಷೇತ್ರದ ಸಮಸ್ತ ಜನರ ಸುಖ, ಶಾಂತಿ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿದರು. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಚುನಾವಣೆಗಳ ಹಿನ್ನೆಲೆಯಲ್ಲಿ ಗ್ರಾಮದಲ್ಲಿನ ಕಾರ್ಯಕರ್ತರೊಂದಿಗೆ ಸಭೆ ನಡೆಸಿ, ಅವರ ಕುಂದು-ಕೊರತೆಗಳನ್ನು ವಿಚಾರಿಸಿದರು.

ಈ ಸಂದರ್ಭದಲ್ಲಿ ಎನ್ ಡಿ ಎ ಮುಖಂಡರಾದ ಜೆ.ಪಿ. ಚಂದ್ರಶೇಖರ್ ರೆಡ್ಡಿ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಂಜುನಾಥ್ ರೆಡ್ಡಿ, ಪೂಲಂಪಲ್ಲಿ ಮಂಜುನಾಥ್, ಎ.ವಿ.ಟಿ. ನಾರಾಯಣ ಸ್ವಾಮಿ, ಅಶ್ವತ್ಥ ರೆಡ್ಡಿ, ಜೆಡಿಎಸ್ ತಾಲೂಕು ಅಧ್ಯಕ್ಷರಾದ ಮಂಜುನಾಥ್ ರೆಡ್ಡಿ, ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಬಾಬು ರೆಡ್ಡಿ, ಎಂ.ವಿ. ವೆಂಕಟೇಶ್, ಸಿ. ರಾಜಣ್ಣ, ಮುನಿಕೃಷ್ಣ, ರವಿಕುಮಾರ್, ಎಂ.ವಿ. ಅಂಬರೀಶ್, ಅಶ್ವತ್ಥಪ್ಪ , ರಮೇಶ್, ಎಂ. ರಾಜಪ್ಪ, ಮುರಳಿ ಎಂ , ಎಂ.ಟಿ. ಶ್ರೀನಿವಾಸ್, ಎಂ.ಜೆ. ರವಿ, ಮೂರ್ತಿ, ಗಂಗಾಧರ, ಶಶಿಕುಮಾರ್, ಅಶ್ವತ್ಥಪ್ಪ, ಕಾಟೇನಹಳ್ಳಿ ನಾಗೇಶ್, ಚಿಂತಕಾಯಲಹಳ್ಳಿ ವೆಂಕಟೇಶ್, ಜಿ.ಟಿ. ವೆಂಕಟೇಶ್, ಕಡೇಹಳ್ಳಿ ಬಾಬು ರೆಡ್ಡಿ, ದಪ್ಪರ್ತಿ ನರೇಂದ್ರ, ಮಾಚಹಳ್ಳಿ ಶಿವಣ್ಣ, ತಿರುಮಣಿ ಕೃಷ್ಣಾರೆಡ್ಡಿ, ಪೈಯೂರು ವೇಣು, ಸುರೇಂದ್ರ ರೆಡ್ಡಿ, ರಾಜಪ್ಪ ಸೇರಿದ್ದಂತೆ ಇನ್ನೀತರರು ಉಪಸ್ಥಿತರಿದ್ದರು.

# ರೂ.800 ಕೋಟಿ ವೆಚ್ಚದಲ್ಲಿ 100 ಶಾಲೆಗಳ ಶಂಕುಸ್ಥಾಪನೆಗೆ ಸಿದ್ಧತೆ : ಸಚಿವ ಯು.ಟಿ.ಖಾದರ್



ಬೆಂಗಳೂರು, : ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನವೆಂಬರ್ ತಿಂಗಳ ಅಂತ್ಯದೊಳಗೆ ರೂ. 800 ಕೋಟಿ ವೆಚ್ಚದಲ್ಲಿ 100 ಶಾಲೆಗಳಿಗೆ ಶಂಕು ಸ್ಥಾಪನೆ ನೆರವೇರಿಸಲಾಗುವುದು ಎಂದು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯ ಸಚಿವಾದ ಯು.ಟಿ.ಖಾದರ್ ಅವರು ತಿಳಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ವಿದ್ಯಾರ್ಥಿವೇತನ ಯೋಜನೆಗಳು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೌಲನಾ ಆಜಾದ್ ಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಶಾಲೆಗಳ ಶಂಕು ಸ್ಥಾಪನೆಗೆ ಬೇಕಾದ ಸಿದ್ಧತೆಯನ್ನು ಮಾಡುತ್ತಿದ್ದೇವೆ ಎಂದರು.

ಇದರ ಜೊತೆಗೆ ಈಗಾಗಲೇ ಪ್ರಾರಂಭ ಮಾಡಿದಂತಹ ಸುಮಾರು 77 ಶಾಲೆಗಳ ಕಟ್ಟಡ ಪೂರ್ಣಗೊಳ್ಳುವ ಹಂತದಲ್ಲಿದ್ದು, ಬಾಕಿ ಇರುವ ಶಾಲೆಗಳ ಕಟ್ಟಡಗಳನ್ನು ಪೂರ್ಣಗೊಳಿಸಲು ಬೇಕಾದ ಸಹಕಾರವನ್ನು ನೀಡಿ, ನವೆಂಬರ್ ಅಂತ್ಯದೊಳಗೆ ಉದ್ಘಾಟನೆ ನೆರವೇರಿಸಲಾಗುವುದು.

ಶಿಶುನಾಳ ಷರೀಫ್ ಶಾಲೆಗಳನ್ನು ಕೂಡ ಅಗತ್ಯ ಇರುವಂತಹ ಮತ್ತು ವಿದ್ಯಾರ್ಥಿಗಳು ಶಾಲೆಗೆ ಬರಬಹುದಾದ ಪ್ರದೇಶ ನೋಡಿಕೊಂಡು ಶಾಲೆಯನ್ನು ಪ್ರಾರಂಭಿಸಲಾಗುವುದು. ಈ ವರ್ಷ ನಮ್ಮ ಇಲಾಖೆ ಮುಖಾಂತರ ಸುಮಾರು 494.71 ಕೋಟಿ ರೂಪಾಯಿಯ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ನೀಡಲಾಗುವುದು ಎಂದರು.

ಪದವಿ ಶಿಕ್ಷಣದಿಂದ ವಂಚಿತರಾದ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದೂರಶಿಕ್ಷಣ ಪದ್ಧತಿಯ ಮೂಲಕ ಪದವಿ/ಸ್ನಾತ್ತಕೋತ್ತರ ಪದವಿ ಶಿಕ್ಷಣ ನೀಡುವ ಯೋಜನೆ ರೂಪಿಸಲಾಗಿದೆ.

ಈ ಯೋಜನೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆ.ಎಸ್.ಒ.ಯು) ಸಹಯೋಗದೊಂದಿಗೆ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಶುಲ್ಕ ರಿಯಾಯಿತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

2025–26 ಮತ್ತು 2026–27ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 8,086 ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2025–26ನೇ ಶೈಕ್ಷಣಿಕ ಸಾಲಿನಲ್ಲಿ ಅನುದಾನ ಲಭ್ಯತೆಯನುಸಾರ 5,328 ವಿದ್ಯಾರ್ಥಿಗಳ ದಾಖಲಾತಿ ಶುಲ್ಕವನ್ನು ಪಾವತಿಸಲಾಗಿದೆ.

2026–27ನೇ ಶೈಕ್ಷಣಿಕ ಸಾಲಿನಲ್ಲಿ ಒಟ್ಟು 12,108 ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಅನುದಾನ ಲಭ್ಯತೆಯನುಸಾರ ರೂ. 5.00 ಕೋಟಿ ಅನುದಾನದಲ್ಲಿ ಕೋರ್ಸ್‌ವಾರು ಹಾಗೂ ಪ್ರವರ್ಗವಾರು ಮೆರಿಟ್ ಆಧಾರದ ಮೇಲೆ 2,758 ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ಸೌಲಭ್ಯವನ್ನು ಒದಗಿಸಲಾಗಿದೆ.

2026–27ನೇ ಸಾಲಿನಲ್ಲಿ ಈ ಯೋಜನೆಗಾಗಿ ಸರ್ಕಾರವು ಒಟ್ಟು ರೂ.15.00 ಕೋಟಿ ಅನುದಾನವನ್ನು ನಿಗದಿಪಡಿಸಿದ್ದು, ಇದರಲ್ಲಿ ರೂ.10 ಕೋಟಿಯನ್ನು 2025–26ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಕೆಗೆ ಹಾಗೂ ರೂ 5.00 ಕೋಟಿಯನ್ನು 2026–27ನೇ ಸಾಲಿನ ಹೊಸ ಪ್ರವೇಶಾತಿಗಳಿಗೆ ಮೀಸಲಿರಿಸಲಾಗಿದೆ. ಇದರ ಮೂಲಕ ಹಿಂದಿನ ಸಾಲಿನ 5,328 ಹಾಗೂ ಪ್ರಸಕ್ತ ಸಾಲಿನ 2,758 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 8,086 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಬಾಕಿ ಉಳಿದ 9350 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅನುದಾನದ ಅವಶ್ಯವಿದ್ದು, ವಿದ್ಯಾರ್ಥಿಗಳು ಒಂದೇ ಪದವಿ/ ಸ್ನಾತಕೋತ್ತರ ಪದವಿಗೆ ಅರ್ಜಿ ಸಲ್ಲಿಸಿರುವ ಕುರಿತು ಪರಿಶೀಲಿಸಿ ತೀರ್ಮಾನಿಸಲಾಗುವುದು ಎಂದರು.ಬಿಬಿಎ ಯಿಂದ ಎಂಬಿಎ, ಬಿ.ಎಸ್.ಸಿ ಯಿಂದ ಬಿಸಿಎ ಯಿಂದ ಎಂ.ಎಸ್.ಸಿ, ಮತ್ತು ಬಿ.ಕಾಂ ನಿಮದ ಎಂ.ಕಾಂ ವರೆಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ ಎಂದು ತಿಳಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಯಾಸ್ಮಿನ್ ಬೇಗಂ ಉಪಸ್ಥಿತರಿದ್ದರು.

## ಅ. 26ರಂದು ಸರಳವಾಗಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ
### ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನದಲ್ಲಿ ಕಾರ್ಯಕ್ರಮ



ಬೆಂ. ಗ್ರಾ. ಜಿಲ್ಲೆ, ಅ. 13 (ಕ.ವಾ): ಅಕ್ಟೋಬರ್ 26 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ, ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು, ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿ ಇರುವದರಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಗುತ್ತದೆ ಎಂದರು.

ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಉಪನ್ಯಾಸ, ಎಸ್ಸೆಸ್ಸೆಲ್ಸಿ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಸನ್ಮಾನ ಇರಲಿದ್ದು ಕಾರ್ಯಕ್ರಮ ಅರ್ಥಪೂರ್ಣ ಆಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಎಡಿಸಿ ಸೂಚಿಸಿದರು.

ಸಭೆಯಲ್ಲಿ ಜಿ.ಪಂ ಮುಖ್ಯ ಯೋಜನಾಧಿಕಾರಿ ರಾಮಕೃಷ್ಣಯ್ಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪಾಂಡುರಂಗ, ಜಿಲ್ಲಾಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

## ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂತಾನ ಹರಣ ಚಿಕಿತ್ಸೆ



ಬೆಂ. ಗ್ರಾ. ಜಿಲ್ಲೆ (ಕ.ವಾ): ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ, ಗ್ರಾಮ ಪಂಚಾಯಿತಿ ಗಳಲ್ಲಿ ಬೀದಿ ನಾಯಿಗಳ ನಿಯಂತ್ರಣಕ್ಕೆ ಕೇರ್ ಆಫ್ ವಾಯ್ಸ್ ಲೆಸ್ ಅನಿಮಲ್ಸ್ ಸಂಸ್ಥೆಯ ನೈಪುಣ್ಯತೆ ಹೊಂದಿರುವ ನುರಿತ ಸಿಬ್ಬಂದಿಗಳು, ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ಹಿಡಿದು, ಸಂತಾನ ಹರಣ, ರೇಬಿಸ್ ನಿರೋಧಕ ಚುಚ್ಚುಮದ್ದು ನೀಡಿ, ಮೂಲ ಸ್ಥಳಕ್ಕೆ ಬಿಡುತ್ತಿದ್ದಾರೆ.

ಇದರಿಂದ ಮುಂದಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಬರಲಿದ್ದು, ಬೀದಿ ನಾಯಿಗಳನ್ನು ಹಿಡಿಯಲು ಸಾರ್ವಜನಿಕರು ಗ್ರಾಮ ಪಂಚಾಯಿತಿ / ಸೇವಾ ಸಂಸ್ಥೆಗೆ ಅಗತ್ಯ ಸಹಕಾರ ನೀಡಬೇಕೆಂದು ಕೇರ್ ಆಫ್ ವಾಯ್ಸ್ ಲೆಸ್ ಅನಿಮಲ್ಸ್ ಸಂಸ್ಥೆ ಮನವಿ ಮಾಡಿದೆ.

ಈಗಾಗಲೇ ಬೀದಿ ನಾಯಿಗಳಿಗೆ ಚುಚ್ಚುಮದ್ದು ನೀಡುವ ಬಗ್ಗೆ ಗ್ರಾಮ ಪಂಚಾಯಿತಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದರು.

ಸಾರ್ವಜನಿಕರು ಗಮನಿಸಬೇಕಾದ ಅಂಶಗಳು :

1) ನಾಯಿ ದಾಳಿ / ಕಚ್ಚುವಿಕೆ ಸಂಭವಿಸಿದಲ್ಲಿ ತಕ್ಷಣ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಬೇಕು.

2) ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕದೆ, ಗ್ರಾಮ ಪಂಚಾಯಿತಿ ನಿಗದಿ ಪಡಿಸಿರುವ ಸ್ಥಳದಲ್ಲಿಯೇ ಹಾಕಬೇಕು.

3) ಬೀದಿ ನಾಯಿಗಳ ಸಂತಾನ ನಿಯಂತ್ರಣ ಹಾಗೂ ಲಸಿಕಾ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಸಹಕರಿಸಬೇಕು.

## ದಸರಾ ಉತ್ಸವ : ಇಂದಿನ ಕಾರ್ಯಕ್ರಮಗಳು

ತುಮಕೂರು(ಕ.ವಾ.): ದಸರಾ ಉತ್ಸವ ಪ್ರಯುಕ್ತ ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಚಾಮುಂಡೇಶ್ವರಿ ದೇವಿಗೆ ನಾಲ್ಕನೇ ದಿನ(ಅಕ್ಟೋಬರ್ 14) ವಾದ ಬುಧವಾರದಂದು ಬೆಳಗ್ಗೆ ಕೂಷ್ಮಾಂಡ ಅಲಂಕಾರ ಮಾಡಲಾಗುವುದು.

ಉತ್ಸವದ ಅಂಗವಾಗಿ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದ ಅಮರಶಿಲ್ಪಿ ಜಕಣಾಚಾರಿ ಸಾಂಸ್ಕೃತಿಕ ವೈಭವ ಮಹಾವೇದಿಕೆಯಲ್ಲಿ ಸಂಜೆ 4 ಗಂಟೆಗೆ ತುಮಕೂರಿನ ಶ್ರೀ ಸತ್ಯಸಾಯಿ ಇಂಟರ್ ನ್ಯಾಷನಲ್ ಶಾಲೆ ವಿದ್ಯಾರ್ಥಿಗಳಿಂದ ನವರಾತ್ರಿ ನೃತ್ಯ ವೈಭವ, ಗಾಂಧಿನಗರ ಸೆಂಟ್ ಮೇರೀಸ್ ಶಾಲೆ ವಿದ್ಯಾರ್ಥಿಗಳಿಂದ ನವ ದುರ್ಗೆಯರ ನೃತ್ಯ, ಉತ್ತರ ಬಡಾವಣೆ ಜಿ.ಎಂ.ಹೆಚ್.ಪಿ.ಎಸ್. ಶಾಲೆಯ ವಿದ್ಯಾರ್ಥಿಗಳಿಂದ ಜಾನಪದ ನೃತ್ಯ, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಭರತನಾಟ್ಯ; ಸಂಜೆ 6.30 ಗಂಟೆಗೆ ಚಿಕ್ಕನಾಯಕನಹಳ್ಳಿ ನಟನಂ ಕಲಾತಂಡದಿಂದ ದಶಾವತಾರ ಹಾಗೂ ಅಷ್ಟಲಕ್ಷ್ಮೀ ವೈಭವ–ನೃತ್ಯ ರೂಪಕ, ಬನಶಂಕರಿ ಮಹಿಳಾ ಭಜನಾ ತಂಡದಿಂದ ಜಾನಪದ ಗೀತೆ ಹಾಗೂ ದಾಸರಪದ; ರಾತ್ರಿ 8.30 ಗಂಟೆಗೆ ಬೆಂಗಳೂರಿನ ಆಲ್ ಓಕೆ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮಗಳು ನಡೆಯಲಿವೆ.

## ಜಿಲ್ಲಾಧಿಕಾರಿಗಳ ಕುಟುಂಬದಿಂದ ದೇವಿಗೆ ಭಕ್ತಿಯ ಆರಾಧನೆ



ತುಮಕೂರು(ಕ.ವಾ.)ಅ.13: ದಸರಾ ಉತ್ಸವ ಪ್ರಯುಕ್ತ ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಪ್ರತಿಷ್ಠಾಪಿಸಿರುವ ಚಂದ್ರಘಂಟ ಅಲಂಕಾರದಲ್ಲಿ ಭಕ್ತರ ಕಣ್ಸೆಳೆಯುತ್ತಿದ್ದ ಚಾಮುಂಡೇಶ್ವರಿ ದೇವಿಗೆ ಮಂಗಳವಾರ ಬೆಳಗ್ಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ತಮ್ಮ ಪತಿ ಪ್ರತೀಪ್ ಕುಮಾರ್ ಕೆ. ಮಗ ಶಿವಚರಣ್, ಮಗಳು ಶಿವಾಂಕ ಹಾಗೂ ಮತ್ತಿತರ ಕುಟುಂಬ ಸದಸ್ಯರೊಂದಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿದರು. ದೇವಿಗೆ ಬೆಳಗಿನಿಂದ ಜರುಗಿದ ಅಭಿಷೇಕ, ದುರ್ಗಾ ಹೋಮ, ಅಷ್ಟಾವಧಾನ ಸೇವೆ, ರಾಷ್ಟ್ರಾಶೀರ್ವಾದ, ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪೂಜಾ ಸೇವೆಯಲ್ಲಿ ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ್ ಅವರ ಧರ್ಮ ಪತ್ನಿ ಕನ್ನಿಕಾಪರಮೇಶ್ವರಿ,

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ, ತಹಶೀಲ್ದಾರ್ ರಾಜೇಶ್ವರಿ, ಅರ್ಚಕರ ಸಂಘದ ಅಧ್ಯಕ್ಷ ರಾಮತೀರ್ಥನ್ ಸೇರಿದಂತೆ ವಿವಿಧ ಅಧಿಕಾರಿ/ಸಿಬ್ಬಂದಿ ಹಾಗೂ ಭಕ್ತಾದಿಗಳು ಭಾಗಿಯಾಗಿ ದೇವಿಯ ಅನುಗ್ರಹಕ್ಕೆ ಪಾತ್ರರಾದರು.

## ಜಂಬೂ ಸವಾರಿ ಮೆರವಣಿಗೆ : ಆನೆಗಳ ತಾಲೀಮಿಗೆ ಚಾಲನೆ



ತುಮಕೂರು(ಕ.ವಾ.)ಅ.13: ದಸರಾ ಮಹೋತ್ಸವದ ಅಂಗವಾಗಿ ಅಕ್ಟೋಬರ್ 21ರಂದು ನಡೆಯಲಿರುವ ಅದ್ದೂರಿ ಜಂಬೂ ಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿರುವ ಆನೆಗಳ ತಾಲೀಮಿಗೆ ಇಂದು ನಗರದಲ್ಲಿ ಚಾಲನೆ ನೀಡಲಾಯಿತು.

ಈ ಬಾರಿ ಜಂಬೂ ಸವಾರಿಯಲ್ಲಿ 3 ಆನೆಗಳು ಪಾಲ್ಗೊಳ್ಳಲಿದ್ದು, ಅಂಬಾರಿ ಹೊರಲಿರುವ ಮಡಿಕೇರಿ ದುಬಾರೆ ಆನೆ ಶಿಬಿರದ 35 ವರ್ಷದ ಲಕ್ಷ್ಮಣನೊಂದಿಗೆ ತುಮಕೂರಿನ ಕರಿಬಸವೇಶ್ವರ ಮಠದ 32 ವರ್ಷದ ಲಕ್ಷ್ಮಿ ಹಾಗೂ ತಿಪಟೂರು ತಾಲ್ಲೂಕು ನೊಣವಿನಕೆರೆ ಕಾಡು ಸಿದ್ದೇಶ್ವರ ಮಠದ 26 ವರ್ಷದ ಲಕ್ಷ್ಮಿ ಹೆಜ್ಜೆ ಹಾಕಲಿವೆ.ಉಪಮುಖ್ಯಮಂತ್ರಿ ಡಾ: ಜಿ. ಪರಮೇಶ್ವರ್ ಅವರ ಧರ್ಮ ಪತ್ನಿ ಕನ್ನಿಕಾಪರಮೇಶ್ವರಿ ಅವರು ಆನೆಗಳಿಗೆ ಪೂಜೆ ಸಲ್ಲಿಸುವ ಮೂಲಕ ತಾಲೀಮಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ, ಅರಣ್ಯ ಸಂರಕ್ಷಣಾಧಿಕಾರಿ ಡಾ: ಸಂತೋಷ್ ಕುಮಾರ್, ತಹಶೀಲ್ದಾರ್ ರಾಜೇಶ್ವರಿ, ಸೇರಿದಂತೆ ವಿವಿಧ ಅಧಿಕಾರಿ/ಸಿಬ್ಬಂದಿ ಹಾಜರಿದ್ದರು.

ಜಂಬೂ ಸವಾರಿ ಮೆರವಣಿಗೆ ಸಾಗಲಿರುವ ನಗರದ ಬಿ.ಜಿ.ಎಸ್. ವೃತ್ತ–ಚರ್ಚ್ ಸರ್ಕಲ್–ಡಿ.ಸಿ. ಕಚೇರಿ–ಅಮಾನಿಕೆರೆ ರಸ್ತೆ–ಶಿವಕುಮಾರ ಸ್ವಾಮೀಜಿ ಸರ್ಕಲ್–ಜೂನಿಯರ್ ಕಾಲೇಜು ಮೈದಾನದ ರಸ್ತೆ ಮಾರ್ಗದಲ್ಲಿ ಆನೆಗಳಿಗೆ ತಾಲೀಮು ನೀಡಲಾಯಿತು.

## ಯಂಗ್ ಇಂಡಿಯಾ ಶಾಲೆಯ ಇಬ್ಬರು ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಭಾಗ್ಯನಗರ:** ಜಿಲ್ಲಾಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಯಂಗ್ ಇಂಡಿಯಾ ಶಾಲೆಯ ಇಬ್ಬರು ವಿದ್ಯಾರ್ಥಿಗಳ ಉತ್ತಮ ಸಾಧನೆ ಮಾಡಿ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಯಂಗ್ ಇಂಡಿಯಾ ಶಾಲೆಯ ಅಂಡರ್–17 ವಿಭಾಗದಲ್ಲಿ ಕಾರ್ತಿಕೇಯ ಡಿ.ಎನ್ ಹಾಗೂ ಅಂಡರ್–14 ವಿಭಾಗದಲ್ಲಿ ಆರ್.ವಿ.ವೇದಾಂಕರೆಡ್ಡಿ

ಉತ್ತಮಪ್ರದರ್ಶನ ನೀಡಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕ ಪ್ರೊ. ಡಿ.ಶಿವಣ್ಣ, ಸಿಇಒ ಅರ್ಜುನ್, ಮುಖ್ಯಶಿಕ್ಷಕಿ ರುಕ್ಮಿಣಿ, ದೈಹಿಕ ಶಿಕ್ಷಣ ಶಿಕ್ಷಕರಾದ ಅಮರನಾಥ್. ಮತ್ತು ರಾಮಾಂಜಿನಪ್ಪ ಟಿ. ನ್ಯಾಷನಲ್ ಕಾಲೇಜು ಗ್ರಂಥಪಾಲಕರು ಹಾಗೂ ತರಬೇತುದಾರರಾದ ಜಯರಾಮರೆಡ್ಡಿ ಟಿ.ಎನ್. ಮತ್ತು ಪಿ.ಎಂ.ಶ್ರೀಶಾಲೆ, ಬಾಗೇಪಲ್ಲಿಯ ವಿಜ್ಞಾನ ಶಿಕ್ಷಕಿ ಶ್ರೀಮತಿ ಭಾರ್ಗವಿ ಕೆ.ಜೆ. ಉಪಸ್ಥಿತರಿದ್ದು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು.



## ವಿಪತ್ತು ನಿರ್ವಹಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ



ಬಾಗೇಪಲ್ಲಿ, ಅ. 13: ಮೈ ಭಾರತ್ ಚಿಕ್ಕಬಳ್ಳಾಪುರ ವತಿಯಿಂದ ಅಂತರರಾಷ್ಟ್ರೀಯ ವಿಪತ್ತು ಅಪಾಯ ಕಡಿತ ದಿನದ ಅಂಗವಾಗಿ ಬಾಗೇಪಲ್ಲಿಯ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಮಂಗಳವಾರ ವಿಪತ್ತು ನಿರ್ವಹಣೆ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ನೈಸರ್ಗಿಕ ವಿಕೋಪಗಳು ಹಾಗೂ ಮಾನವ ನಿರ್ಮಿತ ವಿಪತ್ತುಗಳ ಸ್ವರೂಪ, ಅವುಗಳಿಂದ ಉಂಟಾಗುವ ಅಪಾಯಗಳು ಮತ್ತು ಅವುಗಳನ್ನು ಎದುರಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ವಿಪತ್ತು ಸಂಭವಿಸಿದ ಸಂದರ್ಭದಲ್ಲಿ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟವನ್ನು ತಡೆಗಟ್ಟುವ ವಿಧಾನಗಳು, ತುರ್ತು ಸಂದರ್ಭಗಳಲ್ಲಿ ವಹಿಸಬೇಕಾದ ಸುರಕ್ಷತಾ ಕ್ರಮಗಳು ಹಾಗೂ ವಿಪತ್ತಿನ ನಂತರ ಕೈಗೊಳ್ಳಬೇಕಾದ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳ ಕುರಿತು ವಿವರಿಸಲಾಯಿತು.

ವಿಪತ್ತು ನಿರ್ವಹಣೆಯಲ್ಲಿ ಮುನ್ನೆಚ್ಚರಿಕೆ, ಸಮಯೋಚಿತ ಕ್ರಮ ಹಾಗೂ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾಗಿದ್ದು, ಯುವಜನರು ಈ ಕುರಿತು ಅರಿವು ಬೆಳೆಸಿಕೊಂಡು ಸಮಾಜದಲ್ಲಿ ಜಾಗೃತಿ ಮೂಡಿಸುವ ಜವಾಬ್ದಾರಿಯನ್ನು ವಹಿಸಬೇಕು ಎಂದು ಕರೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮೈ ಭಾರತ್ ಚಿಕ್ಕಬಳ್ಳಾಪುರ ಜಿಲ್ಲಾ ಯುವಜನ ಅಧಿಕಾರಿ ಎ. ಮಹೇಂದ್ರ ರೆಡ್ಡಿ, ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ ಗೌಡ, ತಾಲೂಕು ಅಗ್ನಿಶಾಮಕ ಅಧಿಕಾರಿ ಲಕ್ಷ್ಮಣ್ ಹಾಗೂ ಅಗ್ನಿಶಾಮಕ ಇಲಾಖೆಯ ಪ್ರತಿನಿಧಿ ಬಾಲಪ್ಪ, ಕಾಲೇಜಿನ ಬೋಧಕ ಸಿಬ್ಬಂದಿ ಹಾಗೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಮಾಜಿ ಶಾಸಕ ಜೆ.ಕೆ.ಕೃಷ್ಣಾರೆಡ್ಡಿ ಬಿರುಸಿನ ಮತಯಾಚನೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**



ಚಿಂತಾಮಣಿ : ಕರ್ನಾಟಕ ವಿಧಾನ ಪರಿಷತ್ತಿನ 2026ರ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಕೆ.ಎಂ. ಸುರೇಶ್ ಅವರ ಪರವಾಗಿ ಚಿಂತಾಮಣಿಯ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ಜೆಡಿಎಸ್ ಕೋರ್ ಕಮಿಟಿ ರಾಜ್ಯಾಧ್ಯಕ್ಷ ಹಾಗೂ ಮಾಜಿ ಶಾಸಕ ಜೆ.ಕೆ. ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಮುಖಂಡರು ಜಂಟಿಯಾಗಿ ವಕೀಲರನ್ನು ಭೇಟಿ ಮಾಡಿ ಮತಯಾಚನೆ ಮಾಡಿದರು.

ನಂತರ ವಕೀಲರ ಸಂಘದಲ್ಲಿ ಹಮ್ಮಿಕೊಂಡಿದ್ದ ಸರಳ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಶಾಸಕ ಜೆ.ಕೆ. ಕೃಷ್ಣಾರೆಡ್ಡಿ ಅವರು, ಕೆ.ಎಂ. ಸುರೇಶ್ ಅವರು ಕಳೆದ ಮೂವತ್ತು ವರ್ಷಗಳಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಪದವೀಧರರು ಎದುರಿಸುತ್ತಿರುವ ಉದ್ಯೋಗದ ಕೊರತೆ ಹಾಗೂ ಸೂಕ್ತ ಅವಕಾಶಗಳ ಅಭಾವದಂತಹ ಸಮಸ್ಯೆಗಳನ್ನು ಅವರು ಹತ್ತಿರದಿಂದ ಅರಿತಿದ್ದಾರೆ ಎಂದು ತಿಳಿಸಿದರು.

ಚಿಂತಾಮಣಿಯಲ್ಲಿ ನ್ಯಾಯಾಲಯ ನಿರ್ಮಾಣಕ್ಕೆ 15 ಎಕರೆ ಜಮೀನು ಮಂಜೂರು ತಮ್ಮ ಹಿಂದಿನ ಕಾರ್ಯಗಳನ್ನು ಸ್ಮರಿಸಿದ ಜೆ.ಕೆ. ಕೃಷ್ಣಾರೆಡ್ಡಿ ಅವರು, ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಚಿಂತಾಮಣಿ ನಗರದ ಹೊರವಲಯದ ಬೆಂಗಳೂರು ರಸ್ತೆಯ ಬಳಿ ಹೊಸ ನ್ಯಾಯಾಲಯ ನಿರ್ಮಿಸಲು 20 ಎಕರೆ ಜಮೀನು ಮಂಜೂರು ಮಾಡುವಂತೆ ಮನವಿ ಮಾಡಿದ್ದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಮಂಜುನಾಥರೆಡ್ಡಿ, ಹಿರಿಯ ವಕೀಲರಾದ ಬಿ.ಆರ್. ಶ್ರೀನಾಥ್, ರಾಜಾರಾಂ, ನಾ.ಶಂಕರ್, ಜೆಡಿಎಸ್ ತಾಲೂಕು ಅಧ್ಯಕ್ಷ ದಿನ್ನಮಿಂದಹಳ್ಳಿ ಬೈರಾರೆಡ್ಡಿ, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಗುಡಾರ್ಲಹಳ್ಳಿ ರಾಜಣ್ಣ, ಬಿಜೆಪಿ ನಗರ ಘಟಕದ ಅಧ್ಯಕ್ಷ ಗೋವಿಂದರಾಜ್, ನಿಕಟಪೂರ್ವ ಅಧ್ಯಕ್ಷ ಮಹೇಶ್ ಬೈ, ದೇವರಾಜ್, ಶ್ರುತಿ, ಜೆಡಿಎಸ್ ಎಸ್‌ಸಿ ಘಟಕದ ಜಿಲ್ಲಾಧ್ಯಕ್ಷ ಮಾದಮಂಗಲ ಆಂಜಿ, ಜೆಡಿಎಸ್ ತಾಲೂಕು ಯುವ ಘಟಕದ ಅಧ್ಯಕ್ಷ ವೆಂಕಟಾಚಲಪತಿ ಸೇರಿದಂತೆ ವಕೀಲರ ಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಸೆಪ್ಟೆಂಬರ್ ತಿಂಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಿಸಿದ 4,382 ಪ್ರಯಾಣಿಕರಿಗೆ ದಂಡ

ಬೆಂಗಳೂರು, : ಕರ್ನಾಟಕ ರಾಜ್ಯ ರಸ್ತೆ ನಿಗಮವು (KSRTC) ತನ್ನ ತನಿಖಾ ತಂಡಗಳ ಮೂಲಕ ತಪಾಸಣಾ ಕಾರ್ಯವನ್ನು ಚುರುಕುಗೊಳಿಸಿದ್ದು, 2026ರ ಸೆಪ್ಟೆಂಬರ್ ತಿಂಗಳಲ್ಲಿ ನಿಗಮದ ವ್ಯಾಪ್ತಿಯಲ್ಲಿ ಸಂಚರಿಸುವ ಒಟ್ಟು 42,784 ವಾಹನಗಳನ್ನು ತನಿಖೆಗೊಳಪಡಿಸಿ ಒಟ್ಟು 4,310 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ.

ಟಿಕೆಟ್ ಇಲ್ಲದೆ ಪ್ರಯಾಣಿಸುತ್ತಿದ್ದ 4,382 ಪ್ರಯಾಣಿಕರನ್ನು ಗುರುತಿಸಲಾಗಿದೆ. ಸಿಕ್ಕಿಬಿದ್ದ ಪ್ರಯಾಣಿಕರಿಂದ ಒಟ್ಟು 8,45,034 ರೂಪಾಯಿಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ. ತನಿಖಾಧಿಕಾರಿಗಳು ಒಟ್ಟು 1,12,019 ರೂಪಾಯಿಗಳ ಆದಾಯ ಸೋರಿಕೆಯನ್ನು ಪತ್ತೆಹಚ್ಚಿದ್ದಾರೆ.

ಕರ್ತವ್ಯಲೋಪವೆಸಗಿದ ತಪ್ಪಿತಸ್ಥ ಸಿಬ್ಬಂದಿಯ ವಿರುದ್ಧ

ಇಲಾಖಾ ರೀತ್ಯಾ ಸೂಕ್ತ ಶಿಸ್ತಿನ ಕ್ರಮ ಜರುಗಿಸಲಾಗಿದೆ. ಸಾರ್ವಜನಿಕ ಪ್ರಯಾಣಿಕರು ಬಸ್ಸುಗಳಲ್ಲಿ ಪ್ರಯಾಣಿಸುವಾಗ ಕಡ್ಡಾಯವಾಗಿ ಸರಿಯಾದ ಟಿಕೆಟ್ ಅಥವಾ ಪಾಸ್ ಪಡೆದುಕೊಂಡು ಪ್ರಯಾಣಿಸುವಂತೆ ಕರ್ನಾಟಕ ರಾಜ್ಯ ರಸ್ತೆ ನಿಗಮವು ಮನವಿ ಮಾಡಿದೆ ಎಂದು ಪ್ರಕಟಣೆ ತಿಳಿಸಿದೆ.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515